## ವಾರ್ತಾ ನಿಧಿ

ಸಂಘದ ಸದಸ್ಯರ ನಡುವೆ ಮುಖ್ಯಸಂಪರ್ಕ ಸೇತುವೆಯಾಗಿರುವ ಸಂಘದ ಚಟುವಟಿಕೆಗಳ ಮುಖವಾಣಿಯಾಗಿರುವ ಬಾಂಧವರ ಪ್ರತಿಭೆಗಳಿಗೆ ಒಂದು ಕನ್ನಡಿಯಂತಿರುವ ನಿಮ್ಮ 'ಸಂಕೇತಿ ವಾರ್ತಾ'ವನ್ನು ಸದೃಢಗೊಳಿಸಿ, ಗಟ್ಟಿಯಾಗಿ ತನ್ನ ಕಾಲಮೇಲೆ ನಿಲ್ಲುವಂತೆ ಮಾಡುವ ಹೊಣೆ ನಮ್ಮ-ನಿಮ್ಮೆಲ್ಲರ ಮೇಲಿದೆ. ಈ ನಿಟ್ಟಿನಲ್ಲಿ ಬಾಂಧವರಿಂದ ಉದಾರ ಕೊಡುಗೆಗಳನ್ನು ನಿರೀಕ್ಷಿಸಲಾಗಿದೆ. ಮಾನ್ಯ ಬಾಂಧವರು ತಮ್ಮ ಉದಾರ ಮನಸ್ಸಿನ ಕೊಡುಗೆಗಳನ್ನು ಅಧಿಕ ಸಂಖ್ಯೆಯಲ್ಲಿ ನೀಡಿ ಈ ಔಚಿತ್ಯಪೂರ್ಣ ಕಾರ್ಯದಲ್ಲಿ ಭಾಗಿಗಳಾಗಬೇಕೆಂದು ಕೋರುತ್ತೇವೆ. ಎರಡು ಪ್ರಕಾರದ ದಾನಿಗಳನ್ನು ಗುರುತಿಸಲಾಗುವುದು.

**ರೂ. 5,000/- ಕೊಡುಗೆ ನೀಡುವವರು**
**ಮಹಾಪೋಷಕರು**

**ರೂ. 1,000/- ಕೊಡುಗೆ ನೀಡುವವರು**
**ಪೋಷಕರು**

ದಾನಿಗಳ ಹೆಸರುಗಳನ್ನು ಪ್ರತಿ ತಿಂಗಳೂ 'ವಾರ್ತಾ'ದಲ್ಲಿ ಪ್ರಕಟಿಸಲಾಗುವುದು.




# ಸಂಕೇತಿ ವಾರ್ತಾ

ಬೆಟ್ಟದಪುರ ಸಂಕೇತಿ ಸಂಘದ ಮಾಸಪತ್ರಿಕೆ

ಶ್ರೀ ವಿರೋಧಿನಾಮ ಸಂ|| ಆಶ್ವಯುಜ ಮಾಸ ಸಂಪುಟ - ೨೪

ಅಕ್ಟೋಬರ್ ೨೦೦೯ ಸಂಚಿಕೆ - ೧೦


# Charity begins at heart...

One of the queens of Sweden sold her jewels to provide her people with hospitals and orphanages. One day she visited a convalescent Home she had helped provide for. When tears of gratitude from a bed-ridden woman fell on her hand, she exclaimed "God is sending me back my jewels again" That Queen was loved and revered by everyone for her charitable temperament and selfless attitude. She could have easily led her life insulated, living in a privileged ivory tower, shielding herself from the reality of the world, but the queen truly had a 'queen size heart' and responded to her inner call to help the needy in a positive way.

The Hindu scriptures emphasize on the importance of charity and generosity, in fact all the religions have similar tenets propounding empathy and love for fellow human beings. "Shateshu jaayathe sooraha, Sahasreshucha panditaha, Vakthaa Dasa sahasreshu, daathaa bhavathi naa navaa" goes a Sanskrit saying. It means,

"It is possible for a valorous one being born amongst a hundred, a scholar amongst a thousand, even an orator amongst ten thousand, but it is a rarity for a charitable person being born amongst them all". This reflects the

selfish nature of man and the importance of overcoming that.

It is said that the size of a man is measured by the depth of his conviction, the height of his aspirations, the breadth of his mercy and the reach of his love. With conviction, with the heart and means to help, if man can do charity, the breadth of his personality stretches to the widest. Charity can be shown in more ways than one. By teaching a trade, a vocation, by helping in setting up business, which in turn prevents the 'need' to receive charity, one can prove to be somebody's benefactor. Those with more time at their disposal than money to spare can volunteer to help others in 'kind'. Charity can reach people in many forms. Some people, though of modest means contribute significantly to charities of all sorts. Heart warming stories can be found of daily wagers, housemaids and labourers who lived their lives frugally due to their economic condition, but who made donations through their savings, to enable others to have the opportunities they missed, proving that one does not have to be rich to be charitable and philanthropic.

There is a saying that "one must earn money as though one is going to live forever and that one must 'donate' money as though one is dying the very next day".

When 'head and heart' work in tandem, a person can become a worthy benefactor to many distressed people. Our lives are either sculptures or sand dunes, we are shaped by our purposes or influences.

***







# ಅಧ್ಯಕ್ಷ ನುಡಿ

'ಕಾಲ ಕೆಟ್ಟುಹೋಯಿತು' 'ಮೌಲ್ಯಗಳು ನಾಶವಾದವು' ಎಂದೆಲ್ಲ ಕೇಳಿಬರುತ್ತಿರುವ ಈ ದಿನಗಳಲ್ಲಿ ಮನಸ್ಸನ್ನು ಮುದಗೊಳಿಸುವ, ಆಶ್ಚರ್ಯದ ಸಂಗತಿಯಾದರೂ ನಿಜವಾದ ಮನೋಭಾವದ ಪ್ರಸಂಗಗಳು ಅಪರೂಪವಾದರೂ ಪ್ರಕಟಗೊಂಡಾಗ ಸ್ವಲ್ಪ ಸಮಾಧಾನ ತರುತ್ತವೆ. ಇಂತಹ ಒಂದು ಪ್ರಸಂಗ ನಮ್ಮ ಬಾಂಧವರ ವಿಷಯದಲ್ಲಿ ಘಟಿಸಿ ಸಂಘದ ವೃದ್ಧಾಶ್ರಮಕ್ಕೆ ರೂ. **50,000/-** ಕೊಡುಗೆಯ ರೂಪದಲ್ಲಿ ಸುಖಾಂತಗೊಂಡ ವಿವರಗಳನ್ನು ಪ್ರತ್ಯೇಕವಾಗಿ ಈ ಸಂಚಿಕೆಯಲ್ಲಿಯೇ ನೀಡಿದ್ದೇವೆ. ಮೌಲ್ಯಗಳು ಸಂಪೂರ್ಣವಾಗಿ ಕುಸಿದಿಲ್ಲ, ಅಲ್ಲದೆ ಸದುದ್ದೇಶದ ಕಾರ್ಯಕ್ರಮಗಳಿಗೆ ಸಹಾಯವು ಒಂದಲ್ಲ ಒಂದು ರೀತಿಯಲ್ಲಿ ಒದಗಿಬರುತ್ತದೆ ಎಂಬ ಆಶಾಭಾವನೆಯನ್ನು ಹೊಂದಬಹುದು.

ಸಂಘದ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ನವೆಂಬರ್ **29** ರ ಭಾನುವಾರದಂದು ಬೆಂಗಳೂರಿನಲ್ಲಿ ನಡೆಸಲಾಗುವುದು. ಇದು ಚುನಾವಣಾ ವರ್ಷವಾದ್ದರಿಂದ ನೂತನ ಕಾರ್ಯಕಾರಿ ಸಮಿತಿಯ ಆಯ್ಕೆಗಾಗಿ ಚುನಾವಣೆಗಳು ಇರುತ್ತವೆ. ವಿವರಗಳನ್ನು ಸದ್ಯದಲ್ಲಿಯೇ ನೀಡಲಾಗುವುದು. ಸದಸ್ಯರು ಉತ್ಸಾಹದಿಂದ ಸಭೆಯಲ್ಲಿ ಪಾಲ್ಗೊಳ್ಳಬೇಕಾಗಿ ವಿನಂತಿಸುತ್ತ, ಸರ್ವಸದಸ್ಯರ ಸಭೆಯ ತೀರ್ಮಾನಗಳಿಗೆ ಎಲ್ಲರೂ ಬದ್ಧರಾಗಿ, ಗೌರವಿಸಬೇಕಾಗಿ ಕೋರುತ್ತೇನೆ.

ವೃದ್ಧಾಶ್ರಮದ ನಿರ್ಮಾಣ ಕಾರ್ಯ ಉತ್ತಮ ರೀತಿಯಲ್ಲಿ ಮುಂದುವರೆಯುತ್ತಿದೆ. ಅತಿ ಶೀಘ್ರದಲ್ಲಿಯೇ ಮುಗಿಯಲಿದೆ. ಕೊಡುಗೆಗಳೂ ಬರುತ್ತಿದ್ದು, ಕಳೆದ ತಿಂಗಳಿನಲ್ಲಿ ಬಾಂಧವರಾದ ಶ್ರೀ ಹೆಚ್.ಎನ್. ಮಂಜುನಾಥ್ ಅವರಿಂದ ರೂ. **10,000/-** ಕೊಡುಗೆ ಸಂದಾಯವಾಗಿದ್ದು ಅವರಿಗೆ ಹಾರ್ದಿಕ ವಂದನೆಗಳು ಸಲ್ಲುತ್ತವೆ.

'ವಾರ್ತಾ'ಗೆ ಸರ್ಟಿಫಿಕೇಟ್ ಆಫ್ ರಿಜಿಸ್ಟ್ರೇಷನ್ ದೊರಕಿಸಿಕೊಳ್ಳುವ ಪ್ರಯತ್ನಗಳು ಮುಂದುವರೆದಿವೆ. ನವದೆಹಲಿಯ ಸಂಬಂಧಪಟ್ಟ ಕಛೇರಿಯಿಂದಲೇ ಈ ಕಾರ್ಯವಾಗಬೇಕಾಗಿದೆ. ಬಾಂಧವರಲ್ಲಿ ಯಾರಾದರೂ ಹೆಚ್ಚಿನ ಆಸಕ್ತಿ ವಹಿಸಿ ಸಂಘಕ್ಕೆ ಸಹಾಯ ಮಾಡಬೇಕಾಗಿ ವಿನಂತಿಸುತ್ತೇನೆ.

- ಎಂ. ನರಸಿಂಹನ್



# ಕಾರ್ಯದರ್ಶಿ ಕಾಲಂ

ಸನ್ಮಾನ್ಯ ಸಂಕೇತಿ ಬಂಧುಗಳಿಗೆಲ್ಲಾ ದೀಪಾವಳಿಯ, ಹಾರ್ದಿಕ ಶುಭಾಶಯಗಳು.

ಬಂಧುಗಳೆ, ನಮ್ಮ ರಾಜ್ಯದಲ್ಲಿ ಮತ್ತು ನೆರೆಯ ರಾಜ್ಯಗಳಲ್ಲಿ ವರುಣನ ಆರ್ಭಟ ಎಂಥಾ ರುದ್ರತಾಂಡವವನ್ನಾಡಿದೆ ಎಂಬುದು ನಿಮಗೆಲ್ಲಾ ತಿಳಿದೇ ಇದೆ. ನಮ್ಮ ಉತ್ತರ ಕರ್ನಾಟಕದ ಎಲ್ಲೆಲ್ಲೂ ನೀರೇ ನೀರು. ಸಹಸ್ರಾರು ಜನರು ಮನೆ, ಮಠ, ಆಸ್ತಿ-ಪಾಸ್ತಿಗಳನ್ನು ಕಳೆದುಕೊಂಡಿದ್ದಾರೆ. ನೀರು, ನೂರಾರು ಜನರ ಬಲಿದಾನವನ್ನು ತೆಗೆದುಕೊಂಡಿದೆ. ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಿ, ನಿರ್ವಸಿತರಾದವರಿಗೆ ಅತಿ ಶೀಘ್ರವಾಗಿ ನೆಲೆ, ನೆಮ್ಮದಿ ಸಿಗುವಂತಾಗಲೀ ಎಂದು ಪ್ರಾರ್ಥಿಸುತ್ತಾ ಈ ಕಾಲಂ ಪ್ರಾರಂಭಿಸುತ್ತೇನೆ.

ನಮ್ಮ ವೃದ್ಧಾಶ್ರಮದ ಕೆಲಸ ಒಂದೆರಡು ತಿಂಗಳಲ್ಲಿ ಪೂರ್ಣಗೊಳ್ಳಲಿದೆ ಎಂದು ತಿಳಿಸಲು ಬಹಳ ಸಂತೋಷವಾಗುತ್ತಿದೆ. ಸಾಮಾಜಿಕವಾಗಿ ಅಥವಾ ಆರ್ಥಿಕವಾಗಿ ಕಷ್ಟದಲ್ಲಿರುವ ನಮ್ಮ ಸಮಾಜದ ಹಿರಿಯರಿಗೆ ಒಂದು ನೆಮ್ಮದಿಯ ನೆಲೆ ಯನ್ನೊದಗಿಸುವುದೇ ನಮ್ಮ ಉದ್ದೇಶ. ಈ ಉದ್ದೇಶದಲ್ಲಿ ಸಂಕೇತಿ ಬಂಧುಗಳೆಲ್ಲಾ ಸಹಕರಿಸಿದ್ದೀರಿ, ಇನ್ನು ಮುಂದೆಯೂ ಸಹಕರಿಸುತ್ತೀರೆಂಬ ಭರವಸೆ ಇದೆ. ಏಕೆಂದರೆ ಕಟ್ಟಡ ಕೇವಲ ಪ್ರಾರಂಭ. ಆಶ್ರಮವನ್ನು ನಡೆಸಿಕೊಂಡು ಹೋಗುವ ದೊಡ್ಡ ಜವಾಬ್ದಾರಿಯೇ ನಮ್ಮ ನಿಮ್ಮೆಲ್ಲರ ಮೇಲಿದೆ.

ಇನ್ನೊಂದು ಮುಖ್ಯವಾದ ವಿಷಯ. ಈಗಿನ ಕಾರ್ಯಕಾರಿ ಸಮಿತಿಯ ಅವಧಿ ಮುಗಿದಿದೆ. ಮುಂದಿನ ಕಾರ್ಯಕಾರಿ ಸಮಿತಿಗೆ ಚುನಾವಣೆಯಾಗಬೇಕಿದೆ. ಹಾಗಾಗಿ **ನವೆಂಬರ್ 29ನೇ ತಾರೀಖಿಗೆ ಚುನಾವಣೆಯ ಜತೆಗೆ ಸರ್ವಸದಸ್ಯರ ಸಾಮಾನ್ಯ ಸಭೆಯನ್ನು ನಡೆಸಲು ಸಮಿತಿ ನಿರ್ಧರಿಸಿದೆ.** ವಾಸ್ತವವಾಗಿ ಈಗಿನ ಸಮಿತಿ ಚುನಾಯಿತವಾಗಿದ್ದು ಜನವರಿ 2008ರಲ್ಲಿ. ಹಾಗಾಗಿ ತಾಂತ್ರಿಕವಾಗಿ ಈ ಸಮಿತಿಗೆ ಜನವರಿ 2010ರವರೆವಿಗೂ ಸಮಯವಿದೆ. ಆದರೆ ಕಳೆದ





ವರ್ಷಗಳಲ್ಲಿ ನಿಗದಿತ ಸಮಯಕ್ಕೆ ಚುನಾವಣೆ ನಡೆಯದೆ ಮುಂದೂಡುತ್ತಾ ಬಂದು, ಈಗಲೂ ನಾವು ಇನ್ನೂ 10 ತಿಂಗಳು ಹಿಂದಿದ್ದೇವೆ. ಅಂದರೆ ಈ ನಮ್ಮ 63ನೇ ಸರ್ವ ಸದಸ್ಯರ ಸಭೆ ಜನವರಿ 2009ಕ್ಕೇ ನಡೆಯಬೇಕಾಗಿದ್ದು ಈ ಸಲ ನವೆಂಬರ್‌ನಲ್ಲಿ ನಡೆಸುತ್ತಿದ್ದೇವೆ. ಇನ್ನೊಂದೆರಡು ವರ್ಷಗಳಲ್ಲಿ ಇದನ್ನೂ ಸರಿಯಾದ ಸಮಯಕ್ಕೆ ನಡೆಯುವಂತೆ ಮಾಡಬೇಕೆಂಬ ಉದ್ದೇಶದಿಂದ ಈ ವರ್ಷ 2 ತಿಂಗಳು ಶೀಘ್ರವಾಗಿ ನಡೆಸುತ್ತಿದ್ದೇವೆ. ದಯವಿಟ್ಟು ಎಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಕೋರುತ್ತೇವೆ.

ನಮ್ಮ ಶಾಖೆಯ ಗಣೇಶನ ಮಂಗಳಾರತಿ ಅತಿ ವಿಜೃಂಭಣೆಯಿಂದ ನಡೆದಿದೆ. ಚಿ॥ಗಳಾದ ಶ್ವೇತಾ ಮತ್ತು ನೀತಾ ಅವರ ನೃತ್ಯ, ಚಿ॥ ರಮ್ಯಾಳ ಹಾಡುಗಾರಿಕೆ ಮತ್ತು ಶ್ರೀ ರಾಮಮೂರ್ತಿ ಮತ್ತು ತಂಡದವರ ನಾಟಕ ಎಲ್ಲರ ಮೆಚ್ಚುಗೆಯನ್ನು ಪಡೆದಿದೆ. ಈ ಸಂದರ್ಭದಲ್ಲಿ ಒಂದು ಮಾತು ಹೇಳಲು ಇಷ್ಟಪಡುತ್ತೇನೆ. ಸಂಘದ ಇಂಥಾ ಕಾರ್ಯಕ್ರಮದಲ್ಲಿ ಭಾಗವಹಿಸುವ ಆಸಕ್ತಿಯುಳ್ಳವರು ದಯವಿಟ್ಟು ಸಂಘದ ಕಾರ್ಯಕರ್ತರೊಡನೆ ಸಂಪರ್ಕದಲ್ಲಿರಿ. ಖಂಡಿತಾ ನಿಮ್ಮ ಪ್ರತಿಭೆಯನ್ನು ತೋರ್ಪಡಿಸಲು ಅವಕಾಶ ಇರುತ್ತದೆ. ಮುಖ್ಯವಾಗಿ ಕಾರ್ಯಕ್ರಮದಲ್ಲಿ ಭಾಗವಹಿಸುವ ಆಸಕ್ತಿ ನಿಮ್ಮಲ್ಲಿರಬೇಕು. ಹಾಗೆಯೇ ಒಂದು ಕಾರ್ಯಕ್ರಮ ನೀಡಲು ಒಪ್ಪಿಕೊಂಡನಂತರ ಜವಾಬ್ದಾರಿಯುತವಾಗಿ ಅದನ್ನು ನಡೆಸಿಕೊಡಿ. ಕ್ಷುಲ್ಲಕ ಕಾರಣಗಳಿಗಾಗಿ ಸಮಯಾವಕಾಶವು ಇಲ್ಲದೆ ತಪ್ಪಿಸಿಕೊಳ್ಳಬೇಡಿ. ಏಕೆಂದರೆ ನಾವು ಎಲ್ಲಾ ಕಾರ್ಯಕ್ರಮಗಳನ್ನೂ ಎಣಿಸಿ, ಗುಣಿಸಿ, ನಮ್ಮ ಸಂಕೇತಿ ಪ್ರೇಕ್ಷಕರಿಗೆ ಇಷ್ಟವಾಗುವಂತೆ ನಡೆಸಲು ಬಹಳ ಶ್ರಮಿಸಿರುತ್ತೇವೆ. ಈ ರೀತಿ ದಿಢೀರನೆ ಯಾವುದೇ ಕಾರ್ಯಕ್ರಮ ರದ್ದಾದರೆ, ಆ ಸಮಯಕ್ಕೆ, ನಮ್ಮ ಬಂಧುಗಳ ಅಭಿರುಚಿಗೆ ಹೊಂದುವಂತಹ ಬೇರೆ ಕಾರ್ಯಕ್ರಮ ರೂಪಿಸಲು ಬಹಳವೇ ಕಷ್ಟಪಡಬೇಕಾಗುತ್ತದೆ. ಇನ್ನೂ ಒಂದು ವಿಷಯವೆಂದರೆ, ನಿಮ್ಮಿಂದಾಗಿ ಇನ್ನೊಬ್ಬ ಕಲಾವಿದರಿಗೂ ಅವಕಾಶ ತಪ್ಪಿದಂತಾಗುತ್ತದೆ. ಆದ್ದರಿಂದ ಸಂಘದ ಕಾರ್ಯಕ್ರಮಗಳನ್ನು ಗಂಭೀರವಾಗಿ ತೆಗೆದುಕೊಳ್ಳಿ ಮತ್ತು ಆಸಕ್ತಿಯಿಂದ ಭಾಗವಹಿಸಿ.

– ಎಸ್. ಸಿ. ಮಂಜುನಾಥ್

## ಸೋಜಿಗ ಆದರೂ ಸತ್ಯ

ಮಾನವರಲ್ಲಿ ಪರಸ್ಪರ ಪ್ರೀತಿ, ಅನುಕಂಪ, ಔದಾರ್ಯಗಳು ಕಡಿಮೆ ಆಗುತ್ತಿರುವುದು ನಿಜವಾದರೂ, ಅವುಗಳು ಸಂಪೂರ್ಣವಾಗಿ ನಿಂತೇ ಹೋಗಿವೆಯೆಂದಾಗಲೀ, ಜಗತ್ತು ಪೂರ್ತಿ ಸ್ವಾರ್ಥಮಯವಾಗುತ್ತಿದೆಯೆಂದಾಗಲೀ ನಿರಾಶೆ ಹೊಂದಬೇಕಾಗಿಲ್ಲ ಎನ್ನುವುದಕ್ಕೆ ಇದು ಒಂದು ನಿದರ್ಶನ.

ಬಾಂಧವರಾದ ಶ್ರೀ ಎಂ. ಕೆ. ಕೃಷ್ಣಮೂರ್ತಿ ಹಾಗೂ ಅವರ ಧರ್ಮಪತ್ನಿ ಶ್ರೀಮತಿ ಪುಷ್ಪಾ ಅವರುಗಳು ಕೆಲಸಮಯದ ಹಿಂದೆ ವಿಧಿವಶರಾದರು. ಅವರುಗಳದ್ದು ಒಂದು ರೀತಿಯಲ್ಲಿ ಸಂಕೀರ್ಣ ಬದುಕು. ಸಮೃದ್ಧ ಜೀವನವನ್ನು ನಡೆಸಿಯೂ ಅಂತಿಮ ದಿನಗಳಲ್ಲಿ ಬವಣೆಯನ್ನು ಅನುಭವಿಸಿದರು. ಸಂತಾನವಿಲ್ಲದ ದಂಪತಿಗಳನ್ನು ಆದರಿಸುತ್ತಿದ್ದ ಕೃಷ್ಣಮೂರ್ತಿ ಅವರ ಅಣ್ಣನ ಮಗಳಾದ ಶ್ರೀಮತಿ ಪರಿಮಳ ಹಾಗೂ ಪತಿ ಶ್ರೀ ಚೆನ್ನಪ್ಪ ಅವರಿಂದ ಈ ಆಶ್ಚರ್ಯಕರ ಬೆಳವಣಿಗೆಯ ಮಾಹಿತಿ ಸಿಕ್ಕಿದೆ. ದಿ|| ಕೃಷ್ಣಮೂರ್ತಿಯವರಿಂದ ಬಹಳ ಹಿಂದೆ ರೂ. 50,000/- ಸಹಾಯ ಪಡೆದಿದ್ದ ಶ್ರೀ ಕೆ. ಶ್ರೀನಿವಾಸ ರೆಡ್ಡಿ ಎಂಬ ಉದ್ಯಮಿಯೊಬ್ಬರು ಕೃಷ್ಣಮೂರ್ತಿ ದಂಪತಿಗಳ ಕಷ್ಟಕಾಲದಲ್ಲಿ ಪ್ರತಿ ತಿಂಗಳೂ ರೂ. 3,000/- ಸಹಾಯ ಧನವನ್ನು ಹತ್ತು ವರ್ಷಗಳಿಗೂ ಮೀರಿ ನಿರಂತರವಾಗಿ ನೀಡುತ್ತಿದ್ದರು. ನಂತರ ದಂಪತಿಗಳು ನಿಧನರಾದಾಗ ರೂ. 50,000/- ಬೃಹತ್ ಮೊತ್ತವನ್ನು ಶ್ರೀಮತಿ ಪರಿಮಳ ಅವರಿಗೆ ನೀಡಿ ಅದನ್ನು ಯಾವುದಾದರೂ ಸತ್ಕಾರ್ಯಕ್ಕೆ ಬಳಸಿ ಎಂದು ಕೇಳಿಕೊಂಡರಂತೆ. ಶ್ರೀಮತಿ ಪರಿಮಳ ಅವರು ಸಂಘದ ವೃದ್ಧಾಶ್ರಮಕ್ಕೆ ಕಾಣಿಕೆಯಾಗಿ ಆ ಮೊತ್ತವನ್ನು ನೀಡಿದ್ದಾರೆ.

ಸಂಕೋಚ ಸ್ವಭಾವದ ಪ್ರಚಾರ ಬಯಸದ ಶ್ರೀ ಶ್ರೀನಿವಾಸ ರೆಡ್ಡಿ ಅವರು ವೀರ ವಾಹನ ಉದ್ಯೋಗ್ ಪ್ರೈ. ಲಿಮಿಟೆಡ್ ಎಂಬ ಉದ್ಯಮವನ್ನು ಆನೇಕಲ್ ತಾಲ್ಲೂಕಿನ ಹೆನ್ನಾಗರ ಪೋಸ್ಟ್ ಬಳಿ ನಡೆಸುತ್ತಿದ್ದಾರೆ.

ಈ ಸಂದರ್ಭದಲ್ಲಿ ದಿ|| ಕೃಷ್ಣಮೂರ್ತಿ ದಂಪತಿಗಳನ್ನು ಅವರ ಓಡಾಟದಲ್ಲಿ ನೋಡಿಕೊಳ್ಳುತ್ತಿದ್ದ ಆಟೋ ಚಾಲಕ ಕುಮಾರ್ ಎಂಬುವವರನ್ನೂ ಉಲ್ಲೇಖಿಸಬೇಕು. ಆಕಸ್ಮಿಕವಾಗಿ ಕುಮಾರ್ ಅವರು ಕೃಷ್ಣಮೂರ್ತಿ ದಂಪತಿಗಳನ್ನು ಭೇಟಿ ಮಾಡಿದರೂ ಅವರ ಮೇಲೆ ಆತನ ಅಭಿಮಾನ ಬೆಳೆದು ಅವರ ಓಡಾಟದ ಜವಾಬ್ದಾರಿಯನ್ನು ತಾನೇ ವಹಿಸಿಕೊಂಡ ಕುಮಾರ್‌ನ ಔದಾರ್ಯಕ್ಕೆ ಏನನ್ನೋಣ ?

ದಿ|| ಕೃಷ್ಣಮೂರ್ತಿ ದಂಪತಿಗಳ ಒಳ್ಳೆಯತನ ಶ್ರೀನಿವಾಸ ರೆಡ್ಡಿಯವರ ಕೃತಜ್ಞತಾ ಮನೋಭಾವ, ಕುಮಾರ್‌ನ ಅಂತಃಕರಣ ಹಾಗೂ ಶ್ರೀಮತಿ ಪರಿಮಳ ಹಾಗೂ ಶ್ರೀ ಚೆನ್ನಪ್ಪ ಅವರ ಸ್ನೇಹಪರತೆ ಯಾವಾಗಲೂ, ಎಲ್ಲರಿಗೂ ದಾರಿದೀಪವಾಗಲಿ.





## ಪ್ರತಿಭೆ



**ಕು|| ಎಸ್. ವಿ. ಅರ್ಪಿತಾ**

**10ನೇ ತರಗತಿಯಲ್ಲಿ ಸಂಸ್ಕೃತದಲ್ಲಿ ಶೇ. 96**

ಇವರಿಗೆ ನವದೆಹಲಿಯ ರಾಷ್ಟ್ರೀಯ ಸಂಸ್ಕೃತ ಸಂಸ್ಥಾನದಿಂದ 3000 ರೂ. ಪುರಸ್ಕಾರ ಧನ ಬಂದಿದೆ.

ತಂದೆ : ಎಸ್. ವಿಠೋಬ

ತಾಯಿ : ಶ್ರೀಮತಿ ಆರ್. ಎನ್. ತಾರ

ಅಜ್ಜಂದಿರು : ದಿ|| ಎಸ್. ಎನ್. ಶ್ರೀಕಂಠಯ್ಯ ಮತ್ತು
ದಿ|| ಆರ್.ಎಲ್. ನಾರಾಯಣರಾವ್

ಅಜ್ಜಿಯರು : ದಿ|| ಲಕ್ಷಮ್ಮ ಮತ್ತು ದಿ|| ಕೃಷ್ಣವೇಣಿ

**ಕು|| ಅರ್ಪಿತಾಗೆ ಸಂಘದ ಅಭಿನಂದನೆಗಳು**

## Artistic Panel Required

For the long podium portion of the wall of the **Old Age Home** under completion at Vajarahalli, Bangalore, it is proposed to have some artistic panel to be put either in Cement or any other material. Artists in our community may send proposals at the earliest to the President. They are welcome to visit the site any time, on intimation

## *Change of Address*

**F. S. Shashidhara**
**Lakshmi**

No. 162, 23rd Cross, 10th Main, 3rd Stage,
Vijayanagar 'E' Block, Mysore - 570 017
Phone : 2518930

# ಬೆಟ್ಟದಪುರ ಸಂಕೇತಿ ಸಂಘ (ರಿ.)

## Bettadapura Sankethi Sangha (R.)

ನಂ. 81, 12ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ,
(ಬಿ.ಎನ್.ಎಂ. ಕಾಲೇಜು ಎದುರು)
ಬೆಂಗಳೂರು - 560 070

**ಸರ್ವಸದಸ್ಯರ ಸಾಮಾನ್ಯ ಸಭೆಯ**
**ಸೂಚನಾ ಪ್ರಕಟಣೆ**

**Annual General Body Meeting to be held on 29.11.2009 (Sunday) at 10.30 a.m. at Shashwathi Sabhangana, NMKRV College Campus, 3rd Block, Jayanagar, Bangalore**

ನಮ್ಮ ಸಂಘದ ಅರವತ್ತೂರನೆಯ ವಾರ್ಷಿಕ ಸರ್ವಸದಸ್ಯರ ಸಾಮಾನ್ಯ ಸಭೆಯನ್ನು ದಿನಾಂಕ 29.11.09ರಂದು (ಭಾನುವಾರ) ಬೆಳಿಗ್ಗೆ 10.30ಕ್ಕೆ ಈ ಕೆಳಗಿನ ವಿಷಯಗಳ ಬಗ್ಗೆ ನಿರ್ಣಯ ಕೈಗೊಳ್ಳುವ ಸಲುವಾಗಿ ಕರೆಯಲಾಗಿದೆ. ಸನ್ಮಾನ್ಯ ಸದಸ್ಯರೆಲ್ಲರೂ ಸಕಾಲಕ್ಕೆ ಆಗಮಿಸಿ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕಾಗಿ ವಿನಂತಿ.

ಸ್ಥಳ :
**ಶಾಶ್ವತೀ ಸಭಾಂಗಣ**
ಎನ್.ಎಂ.ಕೆ.ಆರ್.ವಿ. ಕಾಲೇಜು ಆವರಣ
3ನೇ ಬ್ಲಾಕ್ ಜಯನಗರ, ಬೆಂಗಳೂರು

## ವಿಷಯಗಳು ಹಾಗೂ ಕಾರ್ಯಕ್ರಮಗಳು

1. ವೇದಘೋಷ
2. ಪ್ರಾರ್ಥನೆ
3. ಶ್ರದ್ಧಾಂಜಲಿ
4. ಸ್ವಾಗತ ಭಾಷಣ
5. ಸರ್ವಸದಸ್ಯರ ಸಭೆಯ ಸೂಚನಾ ಪ್ರಕಟಣೆಯನ್ನು ಓದಿ ದಾಖಲು ಮಾಡುವುದು.
6. 2008-2009 ವಾರ್ಷಿಕ ವರದಿಯನ್ನು ಓದಿ ದಾಖಲು ಮಾಡುವುದು.
7. 2008-2009ರ ಪರಿಶೋಧಿತ ಲೆಖ್ಖಗಳ ಬಗ್ಗೆ ಚರ್ಚೆ ಮತ್ತು ಅನುಮೋದನೆ. **(Accounts Presentation & Discussion)**
8. ಸದಸ್ಯರು ಪೂರ್ವಭಾವಿಯಾಗಿ ಲಿಖಿತಮೂಲಕ ಕಳುಹಿಸಿದ ವಿಷಯಗಳ ಮಂಡನೆ ಮತ್ತು ಚರ್ಚೆ.
9. ಪ್ರತಿಭಾ ಪುರಸ್ಕಾರ **(Merit Prizes)**
10. ಕಾರ್ಯಕಾರಿ ಸಮಿತಿಯ ಚುನಾವಣಾ ಪ್ರಕ್ರಿಯೆ ಆರಂಭ. (ಅವಶ್ಯವಿದ್ದಲ್ಲಿ) 4.00 ಗಂಟೆಯವರೆಗೆ (Elections for New Managing Committee)
11. ಇತರೆ ವಿಷಯಗಳು - ಅಧ್ಯಕ್ಷರ ಅನುಮತಿಯಿಂದ
12. ಅಧ್ಯಕ್ಷರ ಭಾಷಣ **(Address by the President)**
13. ವಂದನಾರ್ಪಣೆ.

ಕಾರ್ಯಕಾರಿ ಸಮಿತಿಯ ಪರವಾಗಿ
**ಎಸ್. ಸಿ. ಮಂಜುನಾಥ್**
ಗೌ॥ ಕಾರ್ಯದರ್ಶಿ

ವಿ.ಸೂ. : ಸಭೆಯ ಕಾರ್ಯಕಲಾಪದ ನಂತರ ಭೋಜನವನ್ನು ಏರ್ಪಡಿಸಲಾಗಿದೆ.

# ಬೆಟ್ಟದಪುರ ಸಂಕೇತಿ ಸಂಘ (ರಿ.)

ನಂ. 81, 12ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ,
(ಬಿ.ಎನ್.ಎಂ. ಕಾಲೇಜು ಎದುರು)
ಬೆಂಗಳೂರು - 560 070

1. ಸದಸ್ಯರಿಂದ ಸೂಚಿತವಾದ ವಿಷಯಗಳು ಲಿಖಿತ ಮೂಲಕವಾಗಿ ಸಂಘದ ಕಾರ್ಯಾಲಯಕ್ಕೆ (ನಂ. 81, 12ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, (ಬಿ.ಎನ್.ಎಂ. ಕಾಲೇಜು ಎದುರು) ಬೆಂಗಳೂರು - 560 070) ಒಂದು ವಾರ ಮುಂಚಿತವಾಗಿ ಅಂದರೆ 21.11.09 ಒಳಗಾಗಿ ತಲುಪುವಂತೆ ಕಳುಹಿಸತಕ್ಕದ್ದು.

2. ಎಲ್ಲ ಸದಸ್ಯರೂ ಹಾಜರಿ ಪುಸ್ತಕದಲ್ಲಿ ಸಹಿ ಮಾಡತಕ್ಕದ್ದು ಮತ್ತು ಅವರ ವಿಳಾಸದಲ್ಲಿ ಬದಲಾವಣೆ ಇದ್ದಲ್ಲಿ ನೂತನ ವಿಳಾಸವನ್ನು ಅಲ್ಲೇ ತಿಳಿಸಬಹುದು.

## ಗಮನಿಸಿ! ಗಮನಿಸಿ!

ಈ ಹಿಂದೆ ಹಲವು ಬಾರಿ ಪ್ರಕಟಿಸಿರುವಂತೆ ಈ ಸಾಲಿನ ಚುನಾವಣೆಗಳಲ್ಲಿ ಮತದಾನ ಮಾಡಲಿರುವ ಸದಸ್ಯರು ಸಂಘದ ಗುರುತಿನ ಚೀಟಿಯನ್ನು ಹೊಂದಿರುವುದು ಕಡ್ಡಾಯವಾಗಿರುತ್ತದೆ. ಬಹುತೇಕ ಸದಸ್ಯರಿಗೆ ಅವರವರ ಗುರುತಿನ ಚೀಟಿಗಳನ್ನು ಈಗಾಗಲೇ ಕಳುಹಿಸಲಾಗಿದೆ. ಒಂದುವೇಳೆ ಗುರುತಿನ ಚೀಟಿಗಳನ್ನು ಪಡೆಯದೇ ಇರುವ ಸದಸ್ಯರು ಚುನಾವಣಾ ದಿನದಂದಾದರೂ **ಬೆಂಗಳೂರಿನಲ್ಲಿ (29.11.09ರಂದು) ಮೈಸೂರಿನಲ್ಲಿ (06.12.09ರಂದು)** ತಮ್ಮ ಗುರುತಿನ ಚೀಟಿಗಳನ್ನು ಪಡೆದುಕೊಂಡು ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಲು ಕೋರಲಾಗಿದೆ. ಇನ್ನೂ ಸದಸ್ಯರಾಗದೇ ಇರುವವರು **ತಾ|| 15.11.09**ರೊಳಗೆ ಸದಸ್ಯರಾಗಿ ಗುರುತಿನ ಚೀಟಿಯನ್ನು ಪಡೆದು ಮತದಾನವನ್ನು ಮಾಡಬಹುದು.

ಚುನಾವಣಾ ದಿನದಂದೇ ಸದಸ್ಯರಾಗುವವರಿಗೆ ಮತದಾನದ ಹಕ್ಕು ಇರುವುದಿಲ್ಲ.

**ಸೂಚನೆ : 2008-2009ನೇ ಸಾಲಿನ ಪರಿಶೋಧಿತ ಲೆಖ್ಖಗಳು ಸಂಘದ ಕಾರ್ಯಾಲಯದಲ್ಲಿ (ಬೆಂಗಳೂರು) ಮತ್ತು ಮೈಸೂರಿನ ಸಮುದಾಯ ಭವನದ ಕಛೇರಿಯಲ್ಲಿ 9ನೇ ನವೆಂಬರ್ ನಂತರ ದೊರೆಯುತ್ತದೆ. ಆಸಕ್ತರು ಪರಾಮರ್ಶಿಸಬಹುದು.**

# ಚುನಾವಣೆಯಲ್ಲಿ ಸ್ಪರ್ಧಿಸಲು ಅಭ್ಯರ್ಥನೆ ಪತ್ರದ ನಮೂನೆ

ಗೌರವ ಕಾರ್ಯದರ್ಶಿಯವರಿಗೆ, ಬೆಟ್ಟದಪುರ ಸಂಕೇತಿ ಸಂಘ (ರಿ.)

ಮಾನ್ಯರೆ,

ದಿನಾಂಕ 29.11.09ರಂದು 2009-2011ನೇ ಸಾಲುಗಳಿಗಾಗಿ ನಡೆಯಲಿರುವ ನೂತನ ಕಾರ್ಯಕಾರಿ ಸಮಿತಿಯ ಚುನಾವಣೆಯಲ್ಲಿ ಸಂಘದ ಸದಸ್ಯನಾದ ನಾನು ಅಭ್ಯರ್ಥಿಯಾಗಿ ನಿಲ್ಲಲು ಅಪೇಕ್ಷಿಸುತ್ತೇನೆ.

1. ಹೆಸರು, ವಯಸ್ಸು ಮತ್ತು ಉದ್ಯೋಗ :
   (ಸ್ಪಷ್ಟ ಅಕ್ಷರಗಳಲ್ಲಿ)

2. ಸದಸ್ಯತ್ವ ಸಂಖ್ಯೆ :

3. ತಂದೆಯ ಹೆಸರು :

4. ವಿಳಾಸ :

ನನ್ನ ಹೆಸರನ್ನು ಅಭ್ಯರ್ಥಿಗಳ ಪಟ್ಟಿಯಲ್ಲಿ ದಯವಿಟ್ಟು ಸೇರಿಸಬೇಕೆಂದು ಕೋರುವ,

ರುಜು

ಸ್ಥಳ : ಸಂಘದ ಸದಸ್ಯ

# ಚುನಾವಣೆ ನಾಮಕರಣ ಪತ್ರದ ನಮೂನೆ

ಗೌರವ ಕಾರ್ಯದರ್ಶಿಯವರಿಗೆ, ಬೆಟ್ಟದಪುರ ಸಂಕೇತಿ ಸಂಘ (ರಿ.)

ಮಾನ್ಯರೆ,

ದಿನಾಂಕ 29.11.09ರಂದು 2009-2011ನೇ ಸಾಲುಗಳಿಗಾಗಿ ನಡೆಯಲಿರುವ ನೂತನ ಕಾರ್ಯಕಾರಿ ಸಮಿತಿಯ ಚುನಾವಣೆಯಲ್ಲಿ ಸಂಘದ ಸದಸ್ಯನಾದ ನಾನು ಕೆಳಕಂಡ ಉಮೇದುವಾರರನ್ನು ನಾಮಕರಣ ಮಾಡಲು ಇಚ್ಛಿಸುತ್ತೇನೆ.

1. ಉಮೇದುವಾರರ ಹೆಸರು :

2. ಸದಸ್ಯತ್ವ ಸಂಖ್ಯೆ :

3. ತಂದೆಯ ಹೆಸರು :

4. ವಯಸ್ಸು ಮತ್ತು ಉದ್ಯೋಗ :

5. ವಿಳಾಸ :

ಇವರ ಹೆಸರನ್ನು ಉಮೇದುವಾರರ ಪಟ್ಟಿಯಲ್ಲಿ ಸೇರಿಸಬೇಕೆಂದು ಕೋರುವ,

| ಸಂಘದ ಸದಸ್ಯ (ಸೂಚಿಸುವವರು) | ಸಂಘದ ಸದಸ್ಯ (ಅನುಮೋದಿಸುವವರು) | ಕಾರ್ಯಕಾರಿ ಸಮಿತಿಯ ಸದಸ್ಯತ್ವಕ್ಕೆ ಸೂಚಿಸಿರುವುದನ್ನು ಒಪ್ಪಿರುತ್ತೇನೆ |
|---|---|---|
| ರುಜು | ರುಜು | ಸೂಚಿತ ಅಭ್ಯರ್ಥಿಯ ರುಜು |

# ಬೆಟ್ಟದಪುರ ಸಂಕೇತಿ ಸಂಘ (ರಿ.)

## ಸರ್ವಸದಸ್ಯರ ಸಾಮಾನ್ಯ ಸಭೆ – ವಿಶೇಷ ಸೂಚನೆಗಳು

1. ಸದಸ್ಯರಿಂದ ಸೂಚಿತವಾದ ವಿಷಯಗಳು / ನಿರ್ಣಯಗಳನ್ನು ಲಿಖಿತ ಮೂಲಕವಾಗಿ ಸಂಘದ ಕಾರ್ಯಾಲಯಕ್ಕೆ ಒಂದು ವಾರ ಮುಂಚಿತವಾಗಿ (ಅಂದರೆ 21.11.09) ರ ಶನಿವಾರ ಸಂಜೆ 5.00 ಘಂಟೆ ಒಳಗೆ ತಲುಪುವಂತೆ ಕಳುಹಿಸತಕ್ಕದ್ದು.

2. ಎಲ್ಲ ಸದಸ್ಯರೂ ಹಾಜರಿ ಪುಸ್ತಕದಲ್ಲಿ ಸಹಿ ಮಾಡತಕ್ಕದ್ದು ಮತ್ತು ಅವರ ವಿಳಾಸದಲ್ಲಿ ಬದಲಾವಣೆ ಆಗಿದ್ದಲ್ಲಿ, ನೂತರ ವಿಳಾಸವನ್ನು ಅಲ್ಲೇ ತಿಳಿಸಬೇಕು.

3. ಸಂಘದ ಆಜೀವ ಸದಸ್ಯರು ಈಗಾಗಲೇ ತಲುಪಿಸಿರುವ ಗುರುತಿನ ಚೀಟಿಯನ್ನು (Identity Card) ಕಡ್ಡಾಯವಾಗಿ ಹೊಂದಿರಬೇಕು. ಇದನ್ನು ತೋರಿಸಿ ಚುನಾವಣಾ ಚೀಟಿಯನ್ನು (Voting Slip) ಪಡೆಯತಕ್ಕದ್ದು.

4. ಬೈಲಾ ಪ್ಯಾರಾ 6-C (iii) (ಪ್ರಕಾರ ಸರ್ವಸದಸ್ಯರ ಸಭೆಯು ನಡೆಯುವ ತಾರೀಖಿನಿಂದ 15 ದಿನಗಳ ಮುನ್ನ ಸದಸ್ಯರಾಗಿರುವವರಿಗೆ ಮಾತ್ರ (ಎಂದರೆ 15.11.09 ಒಳಗೆ ಸದಸ್ಯತ್ವವನ್ನು ಪಡೆದವರು) ಚುನಾವಣೆಯಲ್ಲಿ ಮತದಾನ ಮಾಡುವ ಅಧಿಕಾರವಿರುತ್ತದೆ. ಆದ್ದರಿಂದ ಇನ್ನೂ ಸದಸ್ಯರಾಗದೇ ಇರುವವರು ಈ ತಾರೀಖಿನ ಒಳಗೆ ಸದಸ್ಯರಾಗಬೇಕೆಂದು ಕೋರಲಾಗಿದೆ.

5. ಸದಸ್ಯರು ಚುನಾವಣಾ ಚೀಟಿಯನ್ನು ತೋರಿಸಿ, ಮತದಾನ ಪತ್ರವನ್ನು (Ballot Paper) ಪಡೆಯತಕ್ಕದ್ದು.

6. 2008–2009ರ ಲೆಕ್ಕಗಳ ಸಾರಾಂಶ (Abstract) ಪರಿಶೋಧನಾ ವರದಿಗಳು (Audit Report), ಇತರ Scheduleಗಳು ಸಂಘದ ಕಛೇರಿಯಲ್ಲಿ ಮತ್ತು ಮೈಸೂರಿನ ಕಲ್ಯಾಣ ಮಂಟಪದ ಕಛೇರಿಯಲ್ಲಿ ಉಪಲಬ್ಧ. ಇಚ್ಛೆಯುಳ್ಳವರು ಆ ಸ್ಥಳಗಳಲ್ಲಿ ಪಡೆಯಬಹುದು.

7. ನೂತನ ಕಾರ್ಯಕಾರಿ ಸಮಿತಿಯ ಚುನಾವಣೆಗೆ ಅಭ್ಯರ್ಥಿಯಾಗಲು ಅಥವಾ ನಾಮಕರಣ ಮಾಡಲು ಬಯಸುವ ಸದಸ್ಯರು ಇದರೊಡನೆ ಲಗತ್ತಿಸಿರುವ ಚುನಾವಣಾ ಅಭ್ಯರ್ಥನ ನಾಮಕರಣ ಪತ್ರವನ್ನು ಭರ್ತಿಮಾಡಿ ಸಂಘದ ಕಾರ್ಯಾಲಯದ ಮೇಲ್ಕಂಡ ವಿಳಾಸಕ್ಕೆ 17.11.09 (ಮಂಗಳವಾರ) ಸಂಜೆ 4 ಗಂಟೆ ಒಳಗೆ ತಲುಪುವಂತೆ ಕಳುಹಿಸತಕ್ಕದ್ದು. ಅಭ್ಯರ್ಥನ ಪತ್ರದ ನಮೂನೆಯ ಎರಡು ಪ್ರತಿಗಳನ್ನು ಪ್ರಕಟಿಸಲಾಗಿದೆ. ಇದನ್ನು ಉಪಯೋಗಿಸಬಹುದು ಅಥವಾ ಪ್ರತ್ಯೇಕವಾದ ಬಿಳಿ ಹಾಳೆಯಲ್ಲಿ ಇದೇ ನಮೂನೆಯ ಪ್ರಕಾರ ಅಭ್ಯರ್ಥನ ಪತ್ರವನ್ನು ಕೈಬರಹ ಅಥವಾ ಟೈಪು ಮಾಡಿ ಕಳುಹಿಸಬಹುದು.

8. ಚುನಾವಣೆ – ಸೂಚನೆಗಳು

   a) ಸಂಘದ ಬೈಲಾ ಪ್ರಕಾರ ಕಾರ್ಯಕಾರಿ ಸಮಿತಿಗೆ ಒಟ್ಟು 11 ಮಂದಿಯನ್ನು ಮಾತ್ರ ಚುನಾಯಿಸಬೇಕಾಗುತ್ತದೆ.

   b) ಸಂಘದ ಸದಸ್ಯತ್ವವನ್ನು ಹೊಂದಿರುವವರು ಚುನಾವಣೆಯಲ್ಲಿ ಸಂಘದಿಂದ ನೀಡಲಾಗುವ ಗುರ್ತಿನ ಚೀಟಿಯನ್ನು ಮತ ಚಲಾಯಿಸುವ ಸಮಯದಲ್ಲಿ ತಪ್ಪದೆ ಹಾಜರಿ ಪಡಿಸತಕ್ಕದ್ದು.

   c) ಅಭ್ಯರ್ಥಿಗಳ ನಾಮಪತ್ರಗಳ ಪರಿಶೀಲನೆ 17.11.09 ಸಂಜೆ 5.00 ಘಂಟೆಗೆ.

   d) ನಾಮಪತ್ರಗಳನ್ನು ಹಿಂತೆಗೆದುಕೊಳ್ಳಲು ಕಡೆಯ ದಿನಾಂಕ 18.11.09 ಸಂಜೆ 5.00 ಘಂಟೆಯವರೆಗೆ.

   e) ಅಭ್ಯರ್ಥಿಗಳ ಅಂತಿಮ ಪಟ್ಟಿ ಪ್ರಕಟಣೆ ಬೆಂಗಳೂರಿನ ಕೇಂದ್ರ ಕಾರ್ಯಾಲಯದಲ್ಲಿ ಮತ್ತು ಮೈಸೂರಿನ ಸಂಘದ ಕಾರ್ಯಾಲಯದಲ್ಲಿ 19.11.09ರಂದು.

   f) ಚುನಾವಣೆ ಇದ್ದಲ್ಲಿ ಬೆಂಗಳೂರಿನಲ್ಲಿ 29.11.09ರಂದು ಬೆಳಿಗ್ಗೆ 11.30ರಿಂದ ಮಧ್ಯಾಹ್ನ 4.00 ಘಂಟೆಯವರೆಗೆ, ಮೈಸೂರಿನಲ್ಲಿ 06.12.09ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 1.00 ಘಂಟೆಯವರೆಗೆ (ಸಂಘದ ಕಲ್ಯಾಣ ಮಂಟಪದಲ್ಲಿ).

## ಪ್ರತಿಭಾ ಪುರಸ್ಕಾರ

2008-2009 ಸಾಲಿನ ಪಬ್ಲಿಕ್ ಪರೀಕ್ಷೆಗಳಾದ SSLC (CBSE & ICSE), PUC, Degree ಹಾಗೂ Ph.D.ಗಳಲ್ಲಿ ಉತ್ತಮ ದರ್ಜೆಯಲ್ಲಿ ತೇರ್ಗಡೆ ಹೊಂದಿರುವ ಮತ್ತು ರಾಜ್ಯಮಟ್ಟದಲ್ಲಿ Rank ಗಳನ್ನು ಪಡೆದಿರುವ ನಮ್ಮ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಪ್ರತಿಭಾ ಪುರಸ್ಕಾರ ಯೋಜನೆಯಡಿಯಲ್ಲಿ ಬಹುಮಾನ ಪಡೆಯಲು ಅರ್ಹರಾಗಿರುತ್ತಾರೆ. 7ನೇ ತರಗತಿಯಲ್ಲಿ 90% ಅಂಕಗಳನ್ನು ಪಡೆದಿರುವವರೂ, SSLCಯಲ್ಲಿ 85% ಮತ್ತು ಅಧಿಕ ಅಂಕಗಳನ್ನು ಪಡೆದಿರುವವರು ಮತ್ತು ಮಿಕ್ಕ ಪರೀಕ್ಷೆಗಳಲ್ಲಿ ಮೊದಲನೇ 10 Rankಗಳಲ್ಲಿ ಸೇರಿರುವವರು ಮತ್ತು Ph.D. ಪಡೆದಿರುವವರೂ ಅರ್ಹರಾಗಿರುತ್ತಾರೆ.

ಈ ಬಹುಮಾನ ಯೋಜನೆಗೆ ಅರ್ಜಿಯನ್ನು ನಮ್ಮ ಸಂಘದ ಕಾರ್ಯಾಲಯಕ್ಕೆ ಸಲ್ಲಿಸಬೇಕು. ಅರ್ಜಿಯನ್ನು ಪ್ರತ್ಯೇಕ ಬಿಳಿ ಹಾಳೆಯಲ್ಲಿ ಕಳುಹಿಸಬಹುದು. ಪೂರ್ಣವಾಗಿ ಭರ್ತಿ ಮಾಡಲ್ಪಟ್ಟ ಅರ್ಜಿಗಳನ್ನು **ತಾ|| 15.11.2009**ರ ಒಳಗೆ ಕಾರ್ಯಾಲಯಕ್ಕೆ ಕಳುಹಿಸಬೇಕಾಗಿ ಕೋರಲಾಗಿದೆ. ನಂತರ ಬರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಅರ್ಜಿಯ ಜೊತೆಯಲ್ಲಿ ವಿದ್ಯಾ ಇಲಾಖೆಯವರಿಂದ ಪಡೆದಿರುವ ರ್‍ಯಾಂಕ್, ವಿಶ್ವವಿದ್ಯಾನಿಲಯ ಸರ್ಟಿಫಿಕೇಟ್ ಮತ್ತು ತೇರ್ಗಡೆಯಾದ ಪರೀಕ್ಷೆಯ ಅಂಕಪಟ್ಟಿ ಇವುಗಳನ್ನು ಕಳುಹಿಸಬೇಕು.





# ಬೆಟ್ಟದಪುರ ಸಂಕೇತಿ ಸಂಘ (ರಿ.)

**ನಂ. 81, 12ನೇ ಮುಖ್ಯರಸ್ತೆ, ಬಿ.ಎಸ್.ಕೆ. 2ನೇ ಹಂತ,**
**(ಬಿ.ಎನ್.ಎಂ. ಕಾಲೇಜು ಎದುರು) ಬೆಂಗಳೂರು - 560 070**

## ಪ್ರತಿಭಾ ಪುರಸ್ಕಾರ ಯೋಜನೆ
## ಬಹುಮಾನಕ್ಕೆ ಅರ್ಜಿ ಪತ್ರ

1. ವಿದ್ಯಾರ್ಥಿಯ ಹೆಸರು
   ಮತ್ತು ವಯಸ್ಸು

2. ತಂದೆ/ತಾಯಿ ಅಥವಾ ಪೋಷಕರ
   ಹೆಸರು, ವಿಳಾಸ ಮತ್ತು ದೂರವಾಣಿ :

3. ವಿದ್ಯಾರ್ಥಿಯು ರ್‍ಯಾಂಕ್ ಪಡೆದ ವಿವರ
   1. ತರಗತಿ ಮತ್ತು ಇಸವಿ
   2. ಶಾಲೆ / ಕಾಲೇಜಿನ ಹೆಸರು
   3. ವಿದ್ಯಾರ್ಥಿಯು ಪಡೆದ ರ್‍ಯಾಂಕ್
   4. ರ್‍ಯಾಂಕ್ ಸರ್ಟಿಫಿಕೇಟ್ ಲಗತ್ತಿಸಿದೆಯೇ
   5. ಅಂಕಪತ್ರ ಲಗತ್ತಿಸಿದೆಯೇ ?

4. ಇತರ ವಿವರಗಳು

ಮೇಲ್ಕಂಡ ವಿವರಗಳು ನನಗೆ ತಿಳಿದ ಮಟ್ಟಿಗೆ ಸತ್ಯವಾಗಿದೆಯೆಂದು ಹೇಳುತ್ತೇನೆ.

ತಂದೆ/ತಾಯಿ/ಪೋಷಕರ ಸಹಿ ವಿದ್ಯಾರ್ಥಿಯ ಸಹಿ

ಸ್ಥಳ : ತಾ||

# ಶುಭ ಸಮಾಚಾರಗಳು

## ಗೃಹಪ್ರವೇಶ :

| ತಾರೀಖು | |
|---|---|
| 21.09.09 | **ಶ್ರೀಮತಿ ವೀಣಾ ಮತ್ತು ಶ್ರೀ ಎಂ. ಎಸ್. ಭಾರ್ಗವ** |
| ಮೈಸೂರು | (ಶ್ರೀಮತಿ ರತ್ನಾ ಮತ್ತು ಶ್ರೀ ಎಂ. ವಿ. ಸುಬ್ರಹ್ಮಣ್ಯ ಅವರ ಪುತ್ರ) |
| 28.09.09 | ಶ್ರೀ ಕೆ. ಎಸ್. ಕೃಷ್ಣಮೂರ್ತಿ ಮತ್ತು ಶ್ರೀಮತಿ ಶಶಿಕಲಾ ಗಿರಿನಗರ 4ನೇ ಹಂತ, ಬೆಂಗಳೂರು ಅವರ ಮಗ, ಶ್ರೀ ಅರುಣ್ ಮತ್ತು ಸೊಸೆ ಶ್ರೀಮತಿ ಎಸ್. ಕೆ. ವಿದ್ಯಾ) |

## ವಿವಾಹ ಮಹೋತ್ಸವ :

| ತಾರೀಖು | ವರ | ವಧು |
|---|---|---|
| 21.09.09 ಬೆಂಗಳೂರು | **ಚಿ॥ರಾ॥ ಶೈಲೇಶ್** (ಶ್ರೀಮತಿ ಮಂಜುಳಾ ಮತ್ತು ಶ್ರೀ ಹೆಚ್.ಎಸ್. ರಮೇಶ್ ಅವರ ಪುತ್ರ) | **ಹ॥ಕುಂ॥ಶೋ॥ ಮೈತ್ರೇಯಿ** (ಶ್ರೀಮತಿ ಗೀತಾ ಮತ್ತು ಶ್ರೀ ಸುರೇಶ್ ಗದ್ವಾಲ್ ಇವರ ಪುತ್ರಿ ಹಾಗೂ ದಿ॥ ಲಕ್ಷ್ಮೀ ಮತ್ತು ದಿ॥ ಗದ್ವಾಲ್ ವೆಂಕಟರಂಗಯ್ಯ ಅವರ ಮೊಮ್ಮಗಳು) |
| 28.09.09 ಬೆಂಗಳೂರು | **ಚಿ॥ರಾ॥ ಜಿ. ಆರ್. ಹರಿಹರನ್** (ಶ್ರೀಮತಿ ಜಗದಾಂಬ ಮತ್ತು ದಿ॥ ರವಿಶಂಕರ್ ಅವರ ಪುತ್ರ ಹಾಗೂ ದಿ॥ ಮೀನಾಕ್ಷಮ್ಮ ಮತ್ತು ದಿ॥ ಹೆಚ್.ಎಸ್. ಸೂರ್ಯನಾರಾಯಣ ಅವರ ಮೊಮ್ಮಗ) | **ಹ॥ಕುಂ॥ಶೋ॥ ಭಾವನಾ ಬಿ. ಎ.** ಶ್ರೀಮತಿ ಶಾಂತಾಮಣಿ (ಮಾಲಾ) ಮತ್ತು ಶ್ರೀ ಬಿ.ಎಸ್.ಅಚ್ಯುತ ಅವರ ಪುತ್ರಿ) |
| 14.10.09 ಬೆಂಗಳೂರು | **ಚಿ॥ ರಾ॥ ಆರ್. ವಿ. ರೋಹಿತ್** (ಶ್ರೀಮತಿ ಮಂಗಳಾ ಮತ್ತು ಶ್ರೀ ಆರ್. ವಿ. ವಸಂತಕುಮಾರ್ ಅವರ ಪುತ್ರ ಹಾಗೂ ಶ್ರೀಮತಿ ಜಯಮ್ಮ ಮತ್ತು ದಿ॥ ಆರ್.ಎಸ್.ವಿ. ಅವಧಾನಿ ಅವರ ಮೊಮ್ಮಗ) | **ಹ॥ಕುಂ॥ಶೋ॥ ಜಿ. ಸ್ನೇಹ** (ಶ್ರೀಮತಿ ಜ್ಯೋತಿ ಮತ್ತು ಶ್ರೀ ಆರ್. ಎಸ್. ಗುರುಕುಮಾರ್ (ಭದ್ರಾವತಿ) ಅವರ ಪುತ್ರಿ ಹಾಗೂ ಶ್ರೀಮತಿ ಪ್ರಸನ್ನಲಕ್ಷ್ಮೀ ಮತ್ತು ದಿ॥ ಸುಬ್ಬರಾವ್ ಅವರ ಮೊಮ್ಮಗಳು) |





| ತಾರೀಖು | ವರ | ವಧು |
|---|---|---|
| 02.10.2009 ಹುಬ್ಬಳ್ಳಿ | ಚಿ॥ ರಾ॥ ಗುರುರಾಜ (ಶ್ರೀಮತಿ ವಿಜಯಾ ಮತ್ತು ಶ್ರೀ ದತ್ತಾತ್ರೇಯ ಕೃಷ್ಣಹೆಗ್ಗಡೆ ಅವರ ಪುತ್ರ) | ಹ॥ಕುಂ॥ಶೋ॥ ಅರ್ಚನಾ. ಆರ್. (ಶ್ರೀಮತಿ ಕನ್ಯಾಕುಮಾರಿ ಮತ್ತು ಶ್ರೀ ಆರ್.ಆರ್.ರಾಮನಾಥ ಅವರ ಪುತ್ರಿ ಹಾಗೂ ದಿ॥ ಗಂಗೂರು ಶ್ಯಾ॥ ರಾಮಸ್ವಾಮಯ್ಯನವರ ಮತ್ತು ಶ್ರೀ ಹೆಚ್.ಸಿ. ವಿಶ್ವೇಶ್ವರಯ್ಯನವರ ಮೊಮ್ಮಗಳು) |

## ಸೆಪ್ಟೆಂಬರ್ ತಿಂಗಳಲ್ಲಿ ಸಂಘಕ್ಕೆ ಬಂದ ಕೊಡುಗೆಗಳು

### ಆಜೀವ ಸದಸ್ಯತ್ವ (ರೂ. 100/-)

| ಹೆಸರು | ಊರು | ರ. ನಂ. | ಆ.ಸ.ಸಂ. |
|---|---|---|---|
| ಕೆ॥ ಆರ್. ನಾಗರಾಜ | ಅಲಹಾಬಾದ್ | 9302 | 2074 |
| ವೀಣಾ ನಾಗರಾಜ್ | ಅಲಹಾಬಾದ್ | 9303 | 2075 |
| ರಮೇಶ್ ಅಯ್ಯ | ನವದೆಹಲಿ | 9304 | 2076 |
| ಸುಮಾ ರಮೇಶ್ | ನವದೆಹಲಿ | 9305 | 2077 |

### ಸಭಾ ತಾಂಬೂಲಗಳು :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಸುರೇಶ್ ಗದ್ವಾಲ್ | ಬೆಂಗಳೂರು | 7796 | 501.00 (ಮಗಳ ಮದುವೆ) |
| ಹೆಚ್. ಎಸ್. ರಮೇಶ್ | ಬೆಂಗಳೂರು | 7798 | 100.00 (ಮಗನ ಮದುವೆ) |
| ಬಿ. ಎಸ್. ಅಚ್ಯುತ | ಬೆಂಗಳೂರು | 7800 | 500.00 (ಮಗಳ ಮದುವೆ) |
| ಕೆ.ಎಸ್.ಕೃಷ್ಣಮೂರ್ತಿ ಮತ್ತು ಅರುಣ್ | ಬೆಂಗಳೂರು | 9301 | 200.00 (ಗೃಹಪ್ರವೇಶ) |

## ವಾರ್ತಾ ಜಾಹೀರಾತು / ಫಂಡ್ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಹೆಚ್. ಆರ್. ಕೃಷ್ಣಕುಮಾರ್ | ಬೆಂಗಳೂರು | 7793 | 1,600.00 |

## ವೃದ್ಧಾಶ್ರಮ ಫಂಡ್ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಪರಿಮಳ ಮತ್ತು ಚನ್ನಪ್ಪ | ಬೆಂಗಳೂರು | 7790 | 50,000.00 |
| (ಎಂ. ಕೆ. ಕೃಷ್ಣಮೂರ್ತಿ ಮತ್ತು ಪುಷ್ಪಾ ಅವರ ನೆನಪು) | | | |
| ಡಾ॥ ಲೋಲ, ಮಾಲಾ, ಲೀಲ ಮತ್ತು ಬಿ. ಕೆ. ಶ್ರೀಮತಿ ಕೃಷ್ಣಪ್ಪ | ಬೆಂಗಳೂರು | 7792 | 5,000.00 |
| (ಎಸ್. ಆರ್. ಕೃಷ್ಣಪ್ಪ ಅವರ ನೆನಪು) | | | |
| ಹೆಚ್. ಎನ್. ಮಂಜುನಾಥ | ನಾಗಪುರ | 7795 | 10,000.00 |

## ಹಾಸ್ಟೆಲ್ ಅನ್ನದಾನ ನಿಧಿ / ಸೇವಾಗೆ ಬಂದ ಕೊಡುಗೆಗಳು :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಬಿ. ಎಸ್. ಸತ್ಯವತಿ | ಬೆಂಗಳೂರು | 7794 | 400.00 (ತಂದೆಯ ನೆನಪು) |
| ಮರೂರು ಕೇಶವಯ್ಯನವರ ಮಕ್ಕಳು ಮತ್ತು ಮೊಮ್ಮಕ್ಕಳು | ಬೆಂಗಳೂರು | 7797 | 4000.00 (ಎಂ.ಕೆ. ಕೃಷ್ಣಮೂರ್ತಿ ನೆನಪು) |
| ಡಾ॥ ಲೋಲ ಚಂದ್ರಶೇಖರ್, ಮಾಲಾ ಶರ್ಮ, ಲೀಲಾ ಶಾಲಿಗ್ರಾಂ | ಬೆಂಗಳೂರು | 7791 | 4,000.00 (ತಂದೆಯ ನೆನಪು) |
| ಅನೂರಾಧಾ ರಾಮಸ್ವಾಮಿ | ಮೈಸೂರು | 9011 | 501.00 (ತಂದೆಯ ನೆನಪು) |

## ಸೆಪ್ಟೆಂಬರ್ ತಿಂಗಳಲ್ಲಿ ನಡೆದ ಹಾಸ್ಟೆಲ್ ಅನ್ನದಾನ ಸೇವಾ :

| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 02.09.09 ಬೆಂಗಳೂರು | ರಮೇಶ್ ಎಸ್.ಜಿ. | ತಾಯಿ ಜಯಲಕ್ಷ್ಮಮ್ಮ |





| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 03.09.09 ಬೆಂಗಳೂರು | ಅನಂತ ಸಾಯಿ ಸುಬ್ರಹ್ಮಣ್ಯ | ತಮ್ಮ ಹುಟ್ಟುಹಬ್ಬ |
| 03.09.09 ಬೆಂಗಳೂರು | ಬಿ.ಎಸ್.ವೆಂಕಟರಾಮಯ್ಯ | ತಂದೆ ಬಿ.ಎಸ್. ಅನಂತ ರಾಮಯ್ಯನವರ ಹುಟ್ಟುಹಬ್ಬ |
| 04.09.09 ಬೆಂಗಳೂರು | ತ್ಯಾಗರಾಜ ಆರ್. ಎಸ್. | ತಂದೆ ನಾರಾಯಣಸ್ವಾಮಿ ಆರ್.ಕೆ. ಮತ್ತು ತಾಯಿ ಸಾವಿತ್ರಮ್ಮ |
| 05.09.09 ಬಾಂಬೆ | ಪ್ರೊ.ಆರ್.ಕೆ. ಶ್ಯಾಮಸುಂದರ್ | ತಂದೆ ಆರ್. ಕೆ. ಆನಂದರಾಮಯ್ಯ |
| 06.09.09 ಬೆಂಗಳೂರು | ಉಮಾ ಶ್ರೀನಿವಾಸನ್ | ತಂದೆ ಎಂ. ಎಸ್. ಸೂರ್ಯನಾರಾಯಣರಾವ್ |
| 06.09.09 ಮೈಸೂರು | ಅನುರಾಧ ರಾಮಸ್ವಾಮಿ | ತಂದೆ ಎಸ್. ರಾಮಸ್ವಾಮಿ |
| 08.09.09 ಮೈಸೂರು | ಜಗದೀಶ್ ಆರ್. ಎಸ್. | ತಾಯಿ ಸಾವಿತ್ರಮ್ಮ |
| 08.09.09 ಬಾಂಬೆ | ಕೃಷ್ಣಮೂರ್ತಿ ಆರ್.ವಿ. | ಹಿರಿಯ ಸಹೋದರಿ ಪಾರ್ವತಿ |
| 08.09.09 ಬೆಂಗಳೂರು | ನಾಗರಾಜ ರಾವ್ ಕೆ. ಎಸ್. | ತಾಯಿ ಸಾವಿತ್ರಮ್ಮ |
| 08.09.09 ಯುಎಸ್ಎ | ವೈದೇಹಿ ಶಿವಶಂಕರ್ | ಪುತ್ರ ರಾಂ ಶಿವಶಂಕರ್ |
| 09.09.09 ಬೆಂಗಳೂರು | ನಾಗಲಕ್ಷ್ಮಮ್ಮ ಸತ್ಯಮೂರ್ತಿ | ಪತಿ ಆರ್.ಎನ್.ಸತ್ಯಮೂರ್ತಿ |
| 11.09.09 ಬೆಂಗಳೂರು | ರಾಮಚಂದ್ರ ಬಿ. ಎಸ್. | ತಾಯಿ ಸೀತಮ್ಮ |
| 13.09.09 ಬೆಂಗಳೂರು | ವಿನೋದ ಎನ್. ಮೂರ್ತಿ | ಪತಿ ಆರ್. ಎಸ್. ನಾರಾಯಣ ಮೂರ್ತಿ |

| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 14.09.09 ಬೆಂಗಳೂರು | ರಾವ್. ಬಿ.ಎನ್.ಎಸ್ | ತಂದೆ ಗದ್ವಾಲ್ ನಾರಣಪ್ಪ |
| 14.09.09 ಬೆಂಗಳೂರು | ಟಿ. ಎಸ್. ಕಶ್ಯಪ್ | ತಂದೆ ಪಿ. ಶಾಮರಾವ್ |
| 14.09.09 ಬೆಂಗಳೂರು | ಸತ್ಯವತಿ ರಾಮಶೇಷನ್ | ತಂದೆ ಪಿ. ಶಾಮರಾವ್ |
| 15.09.09 ಪುಣೆ | ಕೃಷ್ಣಮೂರ್ತಿ ಆರ್.ಎಸ್. | ಸರೋಜಮ್ಮ ಎಂ.ಎಸ್. |
| 17.09.09 ಮೈಸೂರು | ಕಾವೇರಮ್ಮ | ಪತಿ ಕರ್ಪೂರವಲ್ಲಿ ನರಸಿಂಹ ಮೂರ್ತಿ |
| 18.09.09 ಬೆಂಗಳೂರು | ಶಕುಂತಲಾ ವೆಂಕಟಕೃಷ್ಣಪ್ಪ | ರಾಮಕೃಷ್ಣಯ್ಯ (ವಿಶ್ವಾಸಿ) |
| 19.09.09 ಬೆಂಗಳೂರು | ಸರೋಜಾ ರಾಜ್, ಡಾ|| ವಿನೋದ್, ಬಿ.ಜಿ.ಕಿರಣ್ | ಬಿ. ಆರ್. ಗುರುರಾಜ್ |
| 20.09.09 ಬಾಂಬೆ | ಶ್ರೀಕಂಠ ಹೆಚ್.ಎಸ್. | ತಾಯಿ ಪದ್ಮ ಶಿವರಾಮಯ್ಯ |
| 21.09.09 ಮೈಸೂರು | ಆರ್.ಕೆ.ಚಂದ್ರಿಕಾ | ತಂದೆ ಆರ್.ಜಿ. ಕೃಷ್ಣಸ್ವಾಮಿ |
| 21.09.09 ಬೆಂಗಳೂರು | ಲಲಿತಮ್ಮ ಕಾಲಭೈರವನ್ | ಪುಟ್ಟಮ್ಮ (ಚಿಕ್ಕಮ್ಮ) |
| 22.09.09 ಯುಎಸ್ಎ | ಗಣೇಶ್ ಪ್ರಸಾದ್ ಮತ್ತು ಸಹೋದರರು | ತಾಯಿ ಇಂದಿರಾ |
| 23.09.09 ಮೈಸೂರು | ಶಾಂತಮ್ಮ, ರತ್ನಮ್ಮ, ಗೌರಮ್ಮ | ತಂದೆ |
| 25.09.09 ಮೈಸೂರು | ಭಾರತಿ ಶ್ರೀನಿವಾಸ್ | ತಂದೆ ಹೆಚ್. ಎನ್. ವೆಂಕಟರಾಮ್ ಮತ್ತು ಮಾವ ಲಕ್ಷ್ಮೀಕಾಂತಯ್ಯ ಆರ್.ಎಲ್. |





| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 27.09.09 ಬೆಂಗಳೂರು | ರಾಮಸ್ವಾಮಿ ಆರ್.ಸಿ. | ತಾಯಿ ಸುಶೀಲಮ್ಮ |
| 28.09.09 ಮೈಸೂರು | ಬೆಟ್ಟದಪುರ ಸಂಕೇತಿ ಮಂಗಳಕಾರ್ಯ ಸಮಿತಿ | |
| 28.09.09 ಕೆನಡ | ದಿವಾಕರ ಆರ್. ಎ. | ತಾಯಿ ರತ್ನಮ್ಮ |
| 28.09.09 ಬೆಂಗಳೂರು | ರಾಮಸ್ವಾಮಿ ಬಿ. ವಿ. | ತಂದೆ |
| 29.09.09 ಬೆಂಗಳೂರು | ಮಾಯಾ ಹೆಚ್.ವಿ. | |
| 30.09.09 ಬೆಂಗಳೂರು | ಲಲಿತಮ್ಮ ಕಾಲಭೈರವನ್ | ತಮ್ಮ ಹುಟ್ಟುಹಬ್ಬ |

## ಶ್ರದ್ಧಾಂಜಲಿ

02.09.09 ಮೈಸೂರು — **ಕೆ. ವಿ. ಸಾವಿತ್ರಮ್ಮ, 86 ವರ್ಷ, ಕೌಶಿಕ ಗೋತ್ರ**
(ದಿ|| ಕಣಗಾಲ್ ವೆಂಕಟಸುಬ್ಬಯ್ಯನವರ ಧರ್ಮಪತ್ನಿ)

15.09.09 ಬೆಂಗಳೂರು — **ಜಯಲಕ್ಷಮ್ಮ, 75 ವರ್ಷ, ಭಾರದ್ವಾಜಸ ಗೋತ್ರ**
(ದಿ|| ಶಾರದಾ ಮತ್ತು ದಿ|| ರಾಮಸ್ವಾಮಿ ಅವರ ಪುತ್ರಿ)

22.09.09 ಬೆಂಗಳೂರು — **ಪುಷ್ಪಾ, 70 ವರ್ಷ, ಆತ್ರೇಯಸ ಗೋತ್ರ**
(ಶ್ರೀ ಆರ್. ಎನ್. ಸೋಮಶೇಖರ್ ಅವರ ಧರ್ಮಪತ್ನಿ)

07.10.2009 ಬೆಂಗಳೂರು — ಆರ್. ಎಸ್. ವೇದವತಿ, 66 ವರ್ಷ, ಕೌಂಡಿನ್ಯ ಗೋತ್ರ
(ದಿ|| ಪ್ರೊ|| ಆರ್. ವಿ ಸೂರ್ಯನಾರಾಯಣ ಅವರ ಧರ್ಮಪತ್ನಿ)

ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ ಅವರ ಕುಟುಂಬ ವರ್ಗದವರಿಗೆ ಈ ದುಃಖವನ್ನು ಭರಿಸಲು ಧೈರ್ಯ, ಸ್ಥೈರ್ಯಗಳನ್ನು ಭಗವಂತನು ಅನುಗ್ರಹಿಸಲಿ ಎಂದು ಪ್ರಾರ್ಥಿಸುತ್ತೇವೆ.

## ನಮ್ಮವರ ಮಾಂಟೆಸರಿ ಶಾಲೆ

ಮೈಸೂರು ನಗರದ ವಿ. ವಿ. ಮೊಹಲ್ಲಾದ ಒಂಭತ್ತನೇ ಅಡ್ಡರಸ್ತೆಯಲ್ಲಿ ಮೂರು ವರ್ಷದ ಹಿಂದೆ ಪ್ರಾರಂಭಿಸಲಾದ ಬ್ಲೂಮಿಂಗ್ ಬಡ್ಸ್ ಮಾಂಟೆಸರಿ ಶಾಲೆಯನ್ನು ನಮ್ಮ ಸಂಕೇತಿ




ಬಾಂಧವರೇ ಆದ ಶ್ರೀ ಆರ್. ಕೆ. ನಂದಕುಮಾರ್ ಮತ್ತು ಶ್ರೀಮತಿ ಕೃಪಾನಂದಕುಮಾರ್ ನಡೆಸುತ್ತಿದ್ದಾರೆ. ಮೂರು ಮಕ್ಕಳಿಂದ ಪ್ರಾರಂಭವಾದ ಶಾಲೆ ಇಂದು ನಲವತ್ತು ಮಕ್ಕಳಿಗೆ ಪೂರ್ವ ಪ್ರಾಥಮಿಕ ವಿದ್ಯಾಭ್ಯಾಸವನ್ನು ಸಂಪೂರ್ಣ ಮಾಂಟೆಸರಿ ಪದ್ಧತಿಯಲ್ಲೇ ನೀಡುತ್ತಿದೆ.

ಇದೇ ಸೆಪ್ಟೆಂಬರ್ 11ರಂದು ಶಾಲೆಯಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿಯನ್ನು ಆಚರಿಸಲಾಯಿತು. ಮಕ್ಕಳು ಕೃಷ್ಣ-ರಾಧೆಯಂತೆ ಅಲಂಕರಿಸಿಕೊಂಡಿರುವುದನ್ನು ಚಿತ್ರದಲ್ಲಿ ಕಾಣಬಹುದು. ಅಂದು ಮಕ್ಕಳು ಕೃಷ್ಣನಿಗೆ ಪೂಜೆ ಮಾಡಿ, ತಾವು ಕಲಿತ ಕೃಷ್ಣನ ಭಜನೆಗಳನ್ನು ಹಾಡಿ, ನೃತ್ಯ ಮಾಡಿ ಆನಂದಿಸಿದರು.

## *Change of Address*

**B. S. Suryanarayana (Suri Meshtru)**
**Vimala, Srinivasa, Roopa**

No. 211, 4th Main, 3rd Cross, Avalahalli BDA Layout,
BSK 3rd Stage, Girinagar 1st Phase, Bangalore - 85
Phone : 98861 38769





## ಮತಾಂತರವೇ ಸಾಮಾಜಿಕ ಅಶಾಂತಿಗೆ ಕಾರಣ

ದಿನಾಂಕ 30.04.09ರಂದು ಮೈಸೂರಿನ ಜಯನಗರದ ಕೌಶಿಕ ಸಂಕೇತಿ ಸಂಘದ ಸಭಾಂಗಣದಲ್ಲಿ ಈ ಮೇಲಿನ ವಿಷಯದ ಕುರಿತು ಚರ್ಚಾಸ್ಪರ್ಧೆ ನಡೆಸಲಾಗಿತ್ತು. ಕೌಶಿಕ ಸಂಕೇತಿ ವಿದ್ಯಾರ್ಥಿ ನಿಲಯದ ಮುಖ್ಯಸ್ಥರು, ಸಂಚಾಲಕರು ಹಾಗೂ ಇತರೆ ಗಣ್ಯರು ಹಾಜರಿದ್ದರು.

ಸ್ಪರ್ಧಾರ್ಥಿಗಳು ಕನ್ನಡ ಹಾಗೂ ಇಂಗ್ಲೀಷ್ ಎರಡೂ ಭಾಷೆಗಳಲ್ಲಿ ಮಾತನಾಡಿದರು. ಸ್ಪರ್ಧಾ ವಿಷಯವನ್ನು ಅರ್ಥಪೂರ್ಣವಾಗಿ ಪ್ರತಿಪಾದಿಸಿದರು. ಆಂಗ್ಲ ಸ್ಪರ್ಧೆಯಲ್ಲಿ ಪ್ರಥಮ ಹಾಗೂ ದ್ವಿತೀಯ ಬಹುಮಾನ ಶಿವಮೊಗ್ಗ ಸಂಘದವರು ಪಡೆದರು. ಕನ್ನಡದಲ್ಲಿ ಪ್ರಥಮ ಹಾಗೂ ದ್ವಿತೀಯ ಬಹುಮಾನ ಹಾಸನ-ಕೌಶಿಕ ಸಂಕೇತಿ ಸಂಘದ ಪಾಲಾದರೆ ತೃತೀಯ ಬಹುಮಾನ ಮೈಸೂರಿನ ಬೆಟ್ಟದಪುರ ಸಂಕೇತಿ ಸಂಘಕ್ಕೆ ದೊರಕಿತು.

ಬಹುಮಾನವನ್ನು 20.09.2009ರಂದು ವಿಜೇತರಿಗೆ ನೀಡಲಾಗುವುದು. ಕೌಶಿಕ ಸಂಕೇತಿ ಸಂಘವು ಸತತ ಮೂರು ವರ್ಷಗಳಿಂದ ಸ್ಪರ್ಧೆಗಳನ್ನು ನಡೆಸಿಕೊಂಡು ಬಂದಿದೆ.

ನಮ್ಮ ಸಂಘದ ವಿದ್ಯಾರ್ಥಿಯಾದ ನಾನು ಚರ್ಚೆಯಲ್ಲಿ ಭಾಗವಹಿಸಿ ಮೂರನೆ ಬಹುಮಾನ ಪಡೆದಿರುತ್ತೇನೆ.

ವರದಿ : ಸಂಜಯ್. ಎ.
ಬೆಟ್ಟದಪುರ ಸಂಕೇತಿ ಸಂಘ
ಕೆ.ಆರ್.ವನಂ, ಮೈಸೂರು

## ಸನ್ಮಾನ



ತಾ|| 19.09.2009ರಂದು ಕಾಂಚೀಪುರಂನಲ್ಲಿ ನವರಾತ್ರಿ ಸಂದರ್ಭದಲ್ಲಿ ನಡೆದ ''ಸಂಗೀತ ವಿದ್ವತ್ ಸದಸ್''ನಲ್ಲಿ ನಮ್ಮ ಬಂಧುಗಳಾದ ವೇಣುಗಾನ ವಿದ್ವಾನ್ ಬಿ.ಜಿ. ಶ್ರೀನಿವಾಸ್ (ಪಾಪು) ಅವರನ್ನು, ಕಂಚಿ ಕಾಮಕೋಟಿ ಪೀಠದ ಗುರುಗಳಾದ ಶ್ರೀ ಶ್ರೀ ಶ್ರೀ ಜಯೇಂದ್ರ ಸರಸ್ವತೀ ಸ್ವಾಮಿಗಳು ''ಆಸ್ಥಾನ ವಿದ್ವಾಂಸ''ರೆಂದು ಗೌರವಿಸಿ ಆಶೀರ್ವದಿಸಿದರು. ಇದು ನಡೆದದ್ದು ಕಾಮಾಕ್ಷೀ ಅಮ್ಮನವರ ದೇವಸ್ಥಾನದ ಆವರಣದಲ್ಲಿ. ವಿದ್ವಾಂಸರಿಗೆ ಸಂಘದ ಅಭಿನಂದನೆಗಳು.

## ತುಳಸಿ - ಇವಳು ಕೃಷ್ಣನರಸಿ

ನಮಃ ತುಳಸಿ ಕಲ್ಯಾಣಿ ನಮೋ ವಿಷ್ಣುಪ್ರಿಯೆ ಶುಭೇ ।
ನಮೋ ಮೋಕ್ಷಪ್ರದೇ ದೇವಿ ನಮಃ ಸಂಪತ್ ಪ್ರದಾಯಿನಿ ॥

ಭಾರತೀಯ ಪರಂಪರೆಯಲ್ಲಿ ತುಳಸಿಯು ಅತಿ ಪವಿತ್ರವಾದ ದೇವತಾ ಗಿಡವೆಂಬ ಮನ್ನಣೆ ಪಡೆದುಕೊಂಡಿದೆ. ಇದರ ಬೇರು, ಕಾಂಡ, ದಳ, ಬೀಜ ಎಲ್ಲವೂ ಪ್ರಯೋಜನಕಾರಿ. ಪೌರಾಣಿಕ, ವೈಜ್ಞಾನಿಕ ಮತ್ತು ಔಷಧೀಯ ಮಹತ್ವವನ್ನು ಪಡೆದುಕೊಂಡಿರುವ ಗಿಡವಿದು.

ತುಳಸೀ ಪೂಜೆ - ಭಾರತೀಯರ ಆಧ್ಯಾತ್ಮಿಕ, ಸಾಂಸ್ಕೃತಿಕ ಐಕ್ಯತೆಯನ್ನು ಪ್ರತಿಬಿಂಬಿಸುವ ಸನಾತನ ವಿಧಿ. ಇದು ಪರಿಶುದ್ಧತೆಯ ಸಂಕೇತ.

ಸಂಸ್ಕೃತದಲ್ಲಿ ವೈಷ್ಣವೀ, ವೃಂದಾ, ಸುಗಂಧಾ, ಗಂಧಹಾರಿಣೀ, ಅಮೃತಾ, ಪತ್ರಪುಷ್ಪಾ ಪವಿತ್ರ, ಸುರವಲ್ಲರೀ ಮುಂತಾದ ಹೆಸರುಗಳನ್ನು ಹೊಂದಿದೆ. ಶ್ರೀತುಲಸಿ, ಕೃಷ್ಣತುಳಸಿ, ರಾಮತುಳಸಿ, ಕರ್ಪೂರ ತುಳಸಿ ಮೊದಲಾದ ಕಪ್ಪು, ಬಿಳಿ, ಪ್ರಬೇಧಗಳನ್ನು ಹೊಂದಿದವುಗಳಾಗಿದ್ದರೂ ಗುಣದಲ್ಲಿ ಸಮಾನವಾಗಿದೆ. 'ತುಳಸಿ'ಗೆ ತುಲನೆ ಇಲ್ಲದವಳು ಎಂಬ ಅರ್ಥದಿಂದಲೇ ಈ ಹೆಸರು ಬಂದಿದೆ.

### ಪುರಾಣದ ಹಿನ್ನೆಲೆ :

ಹಿಂದೆ ಜಲಂಧರನೆಂಬ ರಾಕ್ಷಸ ರಾಜನು ಭೂಲೋಕವನ್ನು ಆಳುತ್ತಿದ್ದನು. ಅಪ್ರತಿಮ ಸುಂದರಿ, ಪತಿಭಕ್ತಿ ಪರಾಯಣೆ, ಸಾಧ್ವೀಮಣಿಯಾದ ವೃಂದಾ ಇವನ ಪತ್ನಿ.

ತನ್ನ ಕಠೋರ ತಪಸ್ಸಿನಿಂದಲೂ ಪತ್ನಿಯ ಪಾತಿವ್ರತ್ಯದ ಪ್ರಭಾವದಿಂದಲೂ ಜಲಂಧರನಿಗೆ ಅಪೂರ್ವ ವರವೊಂದು ಶಿವನಿಂದ ಲಭಿಸಿತು. ಅದೇನೆಂದರೆ ಎಲ್ಲಿಯವರೆಗೆ ಪತ್ನಿಯ ಪಾತಿವ್ರತ್ಯಕ್ಕೆ ಭಂಗ ಬರುವುದಿಲ್ಲವೋ ಅಲ್ಲಿಯವರೆಗೆ ಅವನು ಅಜೇಯ. ಅವನಿಗೆ ಮೃತ್ಯುವಿನ ಭಯವಿಲ್ಲ.

ಈ ವರದಿಂದ ಜಲಂಧರ ಕೊಬ್ಬಿದ. ಭೂಲೋಕದ ಜನರೆಲ್ಲಾ ಅವನ ಹಿಂಸೆಯಿಂದ ಕಂಗೆಟ್ಟರು. ಶ್ರೀ ಮಹಾವಿಷ್ಣುವಿಗೆ ಆಗ ಜನರೆಲ್ಲಾ ಮೊರೆಯಿಟ್ಟರು. ಆಗ ಶ್ರೀ ಮಹಾವಿಷ್ಣುವು ಒಂದು ಉಪಾಯವನ್ನು ಮಾಡಿದನು. ಅವನು ಜಲಂಧರನು ಯುದ್ಧಕ್ಕೆ ಹೋಗಿದ್ದ ಸಮಯದಲ್ಲಿ ಹೊಂಚುಹಾಕಿ ಜಲಂಧರನ ಅರಮನೆಗೆ ಜಲಂಧರನ ವೇಷದಲ್ಲಿಯೇ ಬಂದು ವೃಂದೆಯ ಪಾತಿವ್ರತ್ಯವನ್ನು ಭಂಗಗೊಳಿಸಿದನು. ಇದರಿಂದಾಗಿ ಜಲಂಧರನಿಗೆ ಯುದ್ಧದಲ್ಲಿ ಮರಣ ಉಂಟಾಯಿತು. ವೃಂದೆಯು ತನ್ನ ಪತಿಯ ಮರಣದ ದುಃಖವನ್ನು ಸಹಿಸಲಾರದೆ ಅಗ್ನಿ ಕುಂಡವನ್ನು ನಿರ್ಮಿಸಿಕೊಂಡು ಅದರೊಳಗೆ ಹಾರಿದಳು.

ಈ ಶೋಕಭರಿತ ದೃಶ್ಯವನ್ನು ನೋಡಿ ಅನುಕಂಪಗೊಂಡ ಪಾರ್ವತೀದೇವಿಯು ಧಗಧಗಿಸುತ್ತಿದ್ದ ಚಿತಾ ಕುಂಡವನ್ನು, ತುಳಸಿ, ನೆಲ್ಲಿ, ಜಾಜಿ ಮೊದಲಾದ ಗಿಡಗಳಿಂದ ಕೂಡಿದ ನಂದನವನವನ್ನಾಗಿ ಪರಿವರ್ತಿಸಿದಳು. ತುಳಸಿಯ ನಿವಾಸ ಸ್ಥಾನ ಅಂದಿನಿಂದ ವೃಂದಾವನವಾಯಿತು. ಮರು ಜನ್ಮದಲ್ಲಿ ತುಳಸಿಯು ರುಕ್ಮಿಣಿಯಾಗಿ ಅವತರಿಸಿ ಶ್ರೀ ಕೃಷ್ಣನನ್ನು ವರಿಸಿದಳು. ಕಾರ್ತೀಕ ಶುಕ್ಲ ದ್ವಾದಶೀ ತಿಥಿಯು ತುಳಸೀ ಕಲ್ಯಾಣದ ದಿನವೆಂದು ಪ್ರಸಿದ್ಧವಾಗಿದೆ.

ತುಳಸಿಯ ಮಹಿಮೆಯನ್ನು ಸಾರುವ ಮತ್ತೊಂದು ಪೌರಾಣಿಕ ಪ್ರಸಂಗವಿದು - ತನ್ನ





ಸೌಂದರ್ಯ ಮತ್ತು ಐಶ್ವರ್ಯದ ಮದದಿಂದ ಪತಿ ಶ್ರೀಕೃಷ್ಣನು ತನ್ನ ಸಾನಿಧ್ಯದಲ್ಲೇ ಯಾವಾಗಲೂ ಇರಬೇಕೆಂಬ ಸಂಕಲ್ಪದಿಂದ ಅವಳು ಒಂದು ವ್ರತವನ್ನು ಆಚರಿಸಿದಳು. ಇದು ನಡೆದದ್ದು ನಾರದನ ಪ್ರೇರಣೆಯಿಂದ. ಈ ವ್ರತದ ಕ್ರಮವೇನೆಂದರೆ ಶ್ರೀಕೃಷ್ಣನನ್ನು ಒಬ್ಬ ಬಡಬ್ರಾಹ್ಮಣನಿಗೆ ದಾನ ಮಾಡಿಬಿಡುವುದು. ಅನಂತರ ಶ್ರೀಕೃಷ್ಣನ ತೂಕದಷ್ಟೇ ರತ್ನಾಭರಣಗಳನ್ನು ಬ್ರಾಹ್ಮಣನಿಗೆ ಕೊಟ್ಟು ಶ್ರೀ ಕೃಷ್ಣನನ್ನು ಹಿಂದಕ್ಕೆ ಪಡೆಯುವುದು. ಆಗ ಶ್ರೀಕೃಷ್ಣ ಇವಳ ಸಾನಿಧ್ಯದಲ್ಲೇ ಸದಾಕಾಲವೂ ಇರುತ್ತಾನೆ.

ಅದರಂತೆಯೇ ಆ ವ್ರತದ ದಿನ ಶ್ರೀಕೃಷ್ಣನನ್ನು ಒಬ್ಬ ಬಡಬ್ರಾಹ್ಮಣನಿಗೆ ಶಾಸ್ತ್ರೋಕ್ತವಾಗಿ ದಾನ ಮಾಡಲಾಯಿತು. ಅವನು ಶ್ರೀ ಕೃಷ್ಣನನ್ನು ತನ್ನ ಮನೆಗೆ ಕರೆದೊಯ್ಯಬೇಕೆನ್ನುವಷ್ಟರಲ್ಲಿ ಭಾಮೆ ಅವನನ್ನು ತಡೆದು, ''ಶ್ರೀಕೃಷ್ಣನಷ್ಟೇ ತೂಕದ ರತ್ನಾಭರಣಗಳನ್ನು ಕೊಡುವೆನು ಅವನನ್ನು ನನಗೊಪ್ಪಿಸು'' ಎಂದು ಬೇಡಿಕೊಂಡಳು. ಬ್ರಾಹ್ಮಣನು ಒಪ್ಪಿಕೊಂಡನು.

ಸರಿ ಭಾಮೆ ಶ್ರೀಕೃಷ್ಣನನ್ನು ತಕ್ಕಡಿಯ ಒಂದು ತಟ್ಟೆಯಲ್ಲಿ ಕೂರಿಸಿ, ಇನ್ನೊಂದು ತಟ್ಟೆಗೆ ತನ್ನ ಸಕಲ ಆಭರಣಗಳನ್ನೂ ಸುರಿದಳು. ಆದರೆ ಆ ತೂಕ ಕೃಷ್ಣನ ತೂಕಕ್ಕೆ ಸರಿತೂಗಲೇ ಇಲ್ಲ. ಸತ್ಯಭಾಮೆ ತನ್ನಲ್ಲಿದ್ದುದನ್ನೆಲ್ಲಾ ತಂದು ತಕ್ಕಡಿಗೆ ಹಾಕಿದರೂ ಅದು ಸರಿಹೊಂದಲೇ ಇಲ್ಲ. ಇಷ್ಟರಲ್ಲಿ ಆ ಬ್ರಾಹ್ಮಣನಾದರೋ ಕೃಷ್ಣನನ್ನು ಕರೆದುಕೊಂಡು ಹೋಗುವೆನೆಂದು ಅವಸರಿಸತೊಡಗಿದನು. ಆಗ ಸತ್ಯಭಾಮೆ ನಿರುಪಾಯಳಾಗಿ ರುಕ್ಮಿಣಿಯನ್ನು ಕರೆತಂದು ತನ್ನ ಅಸಹಾಯಕ ಪರಿಸ್ಥಿತಿಯನ್ನು ವಿವರಿಸಿದಳು.

ರುಕ್ಮಿಣಿಯು ಒಂದು ತುಳಸೀ ದಳವನ್ನು ತಕ್ಕಡಿಯ ತಟ್ಟೆಗೆ ಹಾಕಿ ಕೈ ಮುಗಿದಳು. ಎಲ್ಲರೂ ಅಚ್ಚರಿಯಿಂದ ನೋಡುತ್ತಿದ್ದಂತೆಯೇ ರತ್ನಾಭರಣಗಳು ಇದ್ದ ತಟ್ಟೆ ಏರಿ ಶ್ರೀಕೃಷ್ಣನ ತೂಕಕ್ಕೆ ಸಮನಾಗಿ ನಿಂತಿತು.

ಹೀಗೆ ಸತ್ಯಭಾಮೆಯ ಗರ್ವಭಂಗ ಆಯಿತು. ತುಳಸಿಯ ಮಹಿಮೆ ಹೆಚ್ಚಿತು.

### ತುಳಸಿಯ ಔಷಧೀಯ ಗುಣಗಳು :

1. ಶುದ್ಧ ನೀರಿನಲ್ಲಿ ತುಳಸೀ ದಳವನ್ನು ಕುದಿಸಿ ಕುಡಿದರೆ ಜೀರ್ಣಶಕ್ತಿ ಹೆಚ್ಚುತ್ತದೆ.
2. ಇದನ್ನು ಶುಂಠಿ, ಜೇನುತುಪ್ಪದಲ್ಲಿ ಕಲೆಸಿ ತಿಂದರೆ ಹೊಟ್ಟೆನೋವು, ಹುಳುಬಾಧೆ ತಪ್ಪುತ್ತದೆ.
3. ಇದರ ಬಳಕೆಯಿಂದ ರೋಗ ನಿರೋಧಕ ಶಕ್ತಿ ಹೆಚ್ಚುತ್ತದೆ.
4. ಗಾಳಿಯನ್ನು ಶುದ್ಧಗೊಳಿಸುತ್ತದೆ. ಪರಿಸರ ಮಾಲಿನ್ಯವನ್ನು ಕಡಿಮೆ ಮಾಡುತ್ತದೆ.
5. ಇದರ ದಳವನ್ನು ಬಾಯಲ್ಲಿರಿಸಿಕೊಂಡರೆ ದುರ್ನಾತ ಹರಡುವುದಿಲ್ಲ. ಹೀಗೆಯೇ ಇದರ ಸೇವನೆಯು ದೇಹಕ್ಕೆ ಆರೋಗ್ಯಕರ.

ದೇವ ಪೂಜಾ ಕಾರ್ಯದಲ್ಲಿ ತುಳಸಿಗೆ ಅತ್ಯಂತ ಹೆಚ್ಚಿನ ಸ್ಥಾನವಿದೆ. ''ಒಲ್ಲನೋ ಹರಿ ಕೊಳ್ಳನೋ ತುಳಸಿ ಇಲ್ಲದ ಪೂಜೆಯಾ'' ಎಂದು ದಾಸರು ಹಾಡಿದ್ದಾರೆ.

ತುಲಸೀ ಶ್ರೀ ಸಖೀ ಶುಭೇ ಪಾಪಹಾರಿಣೀ ಪುಣ್ಯದೇ ।
ನಮಸ್ತೇ ನಾರದನುತೇ ನಾರಾಯಣ ಮನಃ ಪ್ರಿಯೇ ॥
ಮನೆಯ ಮುಂಬಾಗಿಲಿನಲ್ಲಿ ಬೃಂದಾವನವಿದ್ದರೆ ಮನೆಗೆ ಶೋಭೆ ಹಾಗೂ ಆರೋಗ್ಯ.

## ಪುಸ್ತಕ ಬಿಡುಗಡೆ

ನಮ್ಮ ಆತ್ಮೀಯ ಬಂಧುಗಳಾದ ಬಸವಾಪಟ್ಟಣ ಶ್ರೀ ಬಿ. ಎನ್. ಶ್ರೀಕಂಠಯ್ಯನವರು ಸಂಯೋಜಿಸಿದ "ವೇದಮಂತ್ರ ಸಂಕೀರ್ಣ" ಗ್ರಂಥವನ್ನು ಬಸವನಗುಡಿ ರಸ್ತೆಯಲ್ಲಿರುವ ಪ್ರಚೇತ ಬುಕ್ ಹೌಸ್‌ನವರು ಪ್ರಕಟಿಸಿದ್ದಾರೆ. ಇದರ ಮೌಲ್ಯ ರೂ. 125/-. ಶೀಘ್ರದಲ್ಲಿ ಬಿಡುಗಡೆಯಾಗಲಿರುವ ಇವರ ಇತರ ಗ್ರಂಥಗಳು (1) ವಿಗ್ರಹ ಪ್ರತಿಷ್ಠಾಪನೆ ಮತ್ತು ದೇವಾಲಯ ನಿರ್ಮಾಣ (ಆಗಮೋಕ್ತ) (2) ಮಹಾರ್ಣವೋಕ್ತ ರುದ್ರೈಕಾದಶಿನಿ (ರುದ್ರಹೋಮ) (3) ಮ್ಯಾಕ್ಸ್‌ಮುಲ್ಲರ್ ಗ್ರಂಥಾಧರಿತ ಮನುಧರ್ಮ ಶಾಸ್ತ್ರ ವಿಪ್ರ ಬಾಂಧವರ ಪ್ರೋತ್ಸಾಹ ಕೋರಲಾಗಿದೆ.

## ವೇದ ಸಂಪುಟಗಳು ಲಭ್ಯ

ಬೆಂಗಳೂರಿನ ಜ್ಯೋತಿ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಪ್ರಕಾಶನಗೊಳ್ಳುತ್ತಿರುವ ಕೃಷ್ಣಯಜುರ್ವೇದದ 7 ಸಂಪುಟಗಳು ಈಗಾಗಲೇ ಪ್ರಕಟಗೊಂಡಿವೆ. 8ನೇ ಸಂಪುಟ ಶೃಂಗೇರಿ ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳವರ ಅಮೃತ ಹಸ್ತದಿಂದ ಬಿಡುಗಡೆಯಾಗಿದೆ. ಇದೂ ಕೂಡ ಈಗ ಲಭ್ಯ. 8 ಸಂಪುಟಗಳ ಒಟ್ಟು ಬೆಲೆ ರೂ. 1725/-.

8ನೇ ಸಂಪುಟದ ಬೆಲೆ ರೂ. 250/-.

ಪ್ರತಿ ಮನೆಯನ್ನೂ ಬೆಳಗುವ ಈ ಅಪೂರ್ವ ಗ್ರಂಥರಾಶಿಯನ್ನು ಕೊಳ್ಳಲು ಬಯಸುವವರು ಈ ಕೆಳಕಂಡವರನ್ನು ಸಂಪರ್ಕಿಸಲು ಕೋರಿದೆ.

ಬಿ. ಎನ್. ವಿ. ಸುಬ್ರಹ್ಮಣ್ಯ
ಜ್ಯೋತಿ ಸಾಂಸ್ಕೃತಿಕ ಪ್ರತಿಷ್ಠಾನ
ನಂ. 31, ಪಂಪ ಮಹಾಕವಿ ರಸ್ತೆ, ಶಂಕರಪುರಂ, ಬೆಂಗಳೂರು – 04
ದೂರವಾಣಿ : 080 – 2667 7852, 94480 55562





## 63ನೇ ವರ್ಷದ ಸ್ವಾತಂತ್ರ್ಯೋತ್ಸವ – ವರದಿ

### ಬೆಟ್ಟದಪುರ ಸಂಕೇತಿ ಸಮುದಾಯ ಭವನ, ಮೈಸೂರು

ದಿನಾಂಕ 15.08.2009 ನೇ ಶನಿವಾರ ಬೆಳಿಗ್ಗೆ 9.30ಕ್ಕೆ ಸರಿಯಾಗಿ ಬೆಟ್ಟದಪುರ ಸಂಕೇತಿ ಸಂಘದ ವಿದ್ಯಾರ್ಥಿ ನಿಲಯದ ಆವರಣದಲ್ಲಿ ಸಂಭ್ರಮದಿಂದ 63ನೇ ವರ್ಷದ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು.

ನಮ್ಮ ಸಂಘದ ಜಂಟಿ ಕಾರ್ಯದರ್ಶಿಗಳಾದ ಶ್ರೀ ಎಂ. ಆರ್. ಶ್ರೀಕಂಠನ್‌ರವರು ಧ್ವಜಾರೋಹಣವನ್ನು ನೆರವೇರಿಸಿದರು. ಅಂದಿನ ಸಭೆಯ ಮುಖ್ಯ ಅತಿಥಿಗಳಾದ ಶ್ರೀಯುತ ಶ್ರೀಕಂಠನ್‌ರವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಭಾಷಣ ಮಾಡಿದರು. ವಾರ್ಡನ್‌ರವರಾದ ಶ್ರೀ ಶಿವಕುಮಾರ್‌ರವರು ವಂದಿಸಿದರು. ನಂತರ ನಿಲಯದ ವಿದ್ಯಾರ್ಥಿಗಳಿಗೆ ಸಿಹಿಯನ್ನು ಹಂಚಲಾಯಿತು.

**ಶಿವಕುಮಾರ್**
ವಿದ್ಯಾರ್ಥಿ ನಿಲಯ ಕ್ಷೇಮಪಾಲಕ

## *Change of Address*

**H. N. Manjunath**
**Sharada**
M/s. Dinshaw's Dairy Foods Ltd.
Gittikhadan, Gorewada Road, Boregoon,
Nagpur - 440013
Phone : 09373288175

## *Change of Address*

**Dr. H. S. Prakash**
**Nagarathna, Ravi, Vidya**
No. 82, "Anshu", 1st Floor, 3rd Main,
Income Tax Layout, Attiguppe,
Vijayanagar, Bangalore - 40
Phone : 2318 1571, 98443 47505

## ಬೆಂಗಳೂರು ಸಂಕೇತಿ ಮಹಿಳಾ ಸಮಾಜ ಟ್ರಸ್ಟ್ (ರಿ.)

ದಿನಾಂಕ 11.07.09ರಂದು ಆದರ್ಶ ವನಿತಾ ಸಮಾಜದಲ್ಲಿ ಸರ್ವ ಸದಸ್ಯರ ಸಭೆಯನ್ನು ಆಯೋಜಿಸಲಾಗಿತ್ತು. ಶ್ರೀಮತಿಯರಾದ ರತ್ನಾರಾವ್ ಮತ್ತು ಪ್ರತಿಭಾ ದೀಕ್ಷಿತ್ ಅವರ ಪ್ರಾರ್ಥನಾ ಗೀತೆಯೊಂದಿಗೆ ಕಾರ್ಯಕ್ರಮವು ಪ್ರಾರಂಭವಾಯಿತು. ಟ್ರಸ್ಟಿಯಾದ ಶ್ರೀಮತಿ ಗೀತಾಕೃಪ ಅವರು ಎಲ್ಲರನ್ನೂ ಸಭೆಗೆ ಸ್ವಾಗತಿಸಿದರು. ನಮ್ಮನ್ನೆಲ್ಲಾ ಅಗಲಿರುವ ಅನೇಕ ಬಂಧುಗಳಿಗೆ ಶ್ರದ್ಧಾಂಜಲಿ ಅರ್ಪಿಸಿ, ಕಾರ್ಯಕ್ರಮವು ಮುಂದುವರೆಯಿತು. ವರ್ಷವಿಡೀ ಟ್ರಸ್ಟ್ ನಡೆಸಿರುವ ಎಲ್ಲಾ ಕಾರ್ಯಕ್ರಮಗಳ ನೆನಪು ಮಾಡಿಕೊಟ್ಟವರು ಮ್ಯಾ॥ ಟ್ರಸ್ಟೀಯವರಾದ ರು.ಕೃ.ಗೀತಾಮಣಿಯವರು. ಟ್ರಸ್ಟಿನ ಭದ್ರತೆಯ ಬಗ್ಗೆ ಎಲ್ಲಾ ಸದಸ್ಯೆಯರಿಗೂ ತಿಳಿದಿರಬೇಕು, ಅದಕ್ಕಾಗಿ ಲೆಕ್ಕ ಪತ್ರದ ಬಗ್ಗೆ ತಿಳಿಸಿ ಹೇಳಿದವರು ಕೋಶಾಧಿಕಾರಿ ಶ್ರೀಮತಿ ಗಾಯತ್ರಿಯವರು. ಲೆಕ್ಕಪತ್ರ ಕೇಳಿದ ಮೇಲೆ, ಟ್ರಸ್ಟಿನ ಆರ್ಥಿಕ ಭದ್ರತೆ ತಿಳಿದು ಎಲ್ಲಾ ಸದಸ್ಯೆಯರೂ ಸಂತೋಷಪಟ್ಟರು. ಸದಸ್ಯೆಯರಿಗಾಗಿ ಒಂದು ಹೊಸ ನಮೂನೆಯ ''Item Housie'' ಆಟವನ್ನು ಆಡಿಸಲಾಯಿತು.

ಸಮಿತಿಯ ಸಭೆಯಲ್ಲಿ ತೀರ್ಮಾನ ಮಾಡಿದಂತೆ 6 ಜನ ಮಹಿಳೆಯರಿಗೆ ಅಶಕ್ತ ಮಾಸಾಶನ (ಒಬ್ಬರಿಗೆ ತಿಂಗಳಿಗೆ ರೂ. 400), ಒಬ್ಬ ವಿದ್ಯಾರ್ಥಿಗೆ ವಿದ್ಯಾಭ್ಯಾಸಕ್ಕೆ ಸಹಾಯ (ರೂ. 6,000) ಮತ್ತು ಇಬ್ಬರು ಮಹಿಳೆಯರಿಗೆ ವೈದ್ಯಕೀಯ ಸಹಾಯ (ತಿಂಗಳಿಗೆ ರೂ. 300ರಂತೆ) ನೀಡಲಾಯಿತು.

ಅಶಕ್ತ ಮಾಸಾಶನಕ್ಕಾಗಿ ಎಸ್. ಆರ್. ಕುಮುದಾ ಛಾರಿಟಬಲ್ ಟ್ರಸ್ಟ್, ಲಕ್ಷ್ಮೀಬಾಯಿ, ಕೌಸಲ್ಯಾಬಾಯಿ, ಸತ್ಯವತಿ ರಾಮಶೇಷನ್, ಲೀಲ ಶ್ರೀಕಂಠಯ್ಯ ಇವರುಗಳು ವರ್ಷಕ್ಕೆ 2,400 ರೂ.ಗಳನ್ನು ಮತ್ತು ಬಿ. ಕೆ. ನಾಗಲಕ್ಷ್ಮೀ ಅವರು 1000 ರೂ.ಗಳನ್ನು ಹಾಗೂ ಸತ್ಯವತಿ. ರಾಮಶೇಷನ್‌ರವರು ವಿದ್ಯಾಭ್ಯಾಸ ಸಹಾಯಕ್ಕಾಗಿ 1000 ರೂ.ಗಳನ್ನು ನೀಡಿದ್ದಾರೆ. ಇವರುಗಳಿಗೆ ಟ್ರಸ್ಟ್ ಧನ್ಯವಾದ ತಿಳಿಸಿತು.

ಹೋದ ತಿಂಗಳು ಮತ್ತು ಅಂದೇ ಆಡಿದ ಎಲ್ಲಾ ಆಟಗಳ ವಿಜೇತರಿಗೆ ಬಹುಮಾನ ನೀಡಲಾಯಿತು.

ಈಗ ಆಡಳಿತ ನಡೆಸುತ್ತಿರುವ ರೀತಿ ಬಹಳ ಚೆನ್ನಾಗಿದೆ, ಟ್ರಸ್ಟ್‌ನ ಅಭಿವೃದ್ಧಿ ಪಡಿಸಲು ಟ್ರಸ್ಟಿಗಳು ಒಮ್ಮನಸ್ಸಿನಿಂದ ಕೆಲಸ ಮಾಡುತ್ತಿದ್ದಾರೆ ಎಂದು ಸದಸ್ಯೆಯರು ತಮ್ಮ ಅಭಿಪ್ರಾಯ ತಿಳಿಸಿ, ಟ್ರಸ್ಟಿಗಳನ್ನು ಅಭಿನಂದಿಸಿದರು. ಶ್ರೀಮತಿ ರಾಜೇಶ್ವರಿ ಎಸ್. ಮೂರ್ತಿಯವರು ತಲೆನೋವಿಗಾಗಿ ಒಂದು ಪುಟ್ಟ ಚಿಕಿತ್ಸಾ ಕ್ರಮವನ್ನು ಸಭೆಗೆ ತಿಳಿಸಿಕೊಟ್ಟರು.

ಇದೇ ಸಂದರ್ಭದಲ್ಲಿ ಮೈಸೂರಿನ ನಮ್ಮ ಸದಸ್ಯೆ ಶ್ರೀಮತಿ ವಿಜಯ ಅವರು ಅಶಕ್ತ





ಮಾಸಾಶನ ನಿಧಿಗಾಗಿ ರೂ. 50,000 ಕಳುಹಿಸಿದ್ದಾರೆ ಎಂಬ ವಿಷಯವನ್ನು ಎಲ್ಲರಿಗೂ ತಿಳಿಸಿ, ಎಲ್ಲರೊಡನೆ ಟ್ರಸ್ಟಿಗಾದ ಸಂತಸವನ್ನು ಹಂಚಿಕೊಂಡವರು ಮ್ಯಾ॥ ಟ್ರಸ್ಟೀ ರು.ಕೃ.ಗೀತಾಮಣಿಯವರು. ಟ್ರಸ್ಟ್ ವಿಜಯರವರ ಸಹಾಯಕ್ಕಾಗಿ ಆಭಾರಿಯಾಗಿದೆ. ಅವರಿಗೆ ಬಹಳ ಧನ್ಯವಾದಗಳು. ನಂತರ ಎಲ್ಲರಿಗೂ ಭೋಜನ ವ್ಯವಸ್ಥೆಯಾಗಿತ್ತು.

ಒಟ್ಟಿನಲ್ಲಿ ಸದಸ್ಯೆಯರೆಲ್ಲರಿಗೂ ಹೊಸದಾಗಿ ಆಡಿಸಿದ Item Housie ಬಗ್ಗೆ ಅಚ್ಚರಿ, ಟ್ರಸ್ಟಿನ ಅಭಿವೃದ್ಧಿ ಬಗ್ಗೆ ತಮ್ಮ ಮೆಚ್ಚುಗೆ ಮತ್ತು ಅಚ್ಚುಕಟ್ಟಾದ, ರುಚಿಯಾದ ಊಟದ ಬಗ್ಗೆ ತಮ್ಮ ತೃಪ್ತಿಯನ್ನು ವ್ಯಕ್ತಪಡಿಸುತ್ತಾ ಸಂತೋಷದಿಂದ ಮನೆಗೆ ತೆರಳಿದರು.

ಇಂದಿನ 'Item Housie' ಆಟದ ವಿಜೇತರುಗಳ ಪಟ್ಟಿ ಹೀಗಿದೆ.

| ಆಟದ ಹೆಸರು | ''Item Housie '' |
|---|---|
| I Full House | ಶ್ರೀಮತಿ ವನಿತಾ. ಎಂ. |
| II Full House | ಶ್ರೀಮತಿಯರಾದ ಮಂಜುಳಾ ಭೂಷಣ್, ಭಾಗ್ಯವತಿ, ಗೀತಾಮೂರ್ತಿ, ಗಿರಿಜಾ ಶ್ರೀನಾಥ |
| I Line | ಶ್ರೀಮತಿ ರಮಾ ಶ್ರೀಕಂಠ |
| II Line | ಶ್ರೀಮತಿ ಶಾರದಾ ರಾವ್ |
| III Line | ಡಾ॥ ಸ್ವರ್ಣ ಗೌರಿ |
| 4 Corners | ಶ್ರೀಮತಿ ರಮಾ ಶ್ರೀಕಂಠ |
| ''ಅಯ್ಯೋಪಾಪ'' ಪ್ರೈಸ್ | ಶ್ರೀಮತಿ ಸುಕನ್ಯಾಮೂರ್ತಿ, ಲಲಿತಾ ಬಾಲಸುಬ್ರಹ್ಮಣ್ಯ ಉಷಾ ಶ್ರೀನಾಥ್ |

ಬಹುಮಾನ ವಿಜೇತರಿಗೆ ಅಭಿನಂದನೆಗಳು

ರು. ಕೃ. ಗೀತಾಮಣಿ
ಮ್ಯಾನೇಜಿಂಗ್ ಟ್ರಸ್ಟೀ
ದೂ : 26695657

## *Change of Address*

**S. C. Manjunatha**
**Sandhya**

No. 30, Thulaja Bhavani Nilaya, 1st Floor, 13th Main,
Motappa Garden, Raghavendra Extn., Hosakerehalli,
Bangalore - 560 085. Ph : 9731988788